# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXI - 12 ಡಿಸೆಂಬರ್ 2003

### ಈ ಸಂಚಿಕೆಯಲ್ಲಿ


ಅಸೋಸಿಯೇಶನ್‌ನಲ್ಲಿ :

| | | |
|---|---|---|
| ಕರ್ನಾಟಕದ ಗಾನ ಕೋಗಿಲೆ ಮುಂಬೈನಲ್ಲಿ | ● ರಮಾ ವಸಂತ್ | 2 |
| Forthcoming Programmes | | |
| ಜನವರಿ 3 ಮತ್ತು 4ರಂದು ನಗರದಲ್ಲಿ ಹೊರನಾಡ ಕನ್ನಡಿಗರ ಸಮಾವೇಶ | | |
| ಅಧ್ಯಯನ ಶಿಬಿರ - ಒಂದು ವರದಿ | ● ಶ್ಯಾಮಲಾ ರಾಧೇಶ್ | 3 |
| ಸಂಗೀತ ಶಿಬಿರದ ಅನುಭವ - ಅನಿಸಿಕೆ | ● ನಳಿನಿ ರಾವ್ | 5 |
| ತಿಂಗಳ ನಾಟಕ - ಗೋಡೇ ಬೇಕೇ ಗೋಡೆ | | 5 |
| ಸಂದರ್ಶನ : ಡಾ। ಸುಕನ್ಯಾ ಪ್ರಭಾಕರ್ | ● ಶ್ಯಾಮಲಾ ರಾಧೇಶ್ | 6 |
| ಮೂಡುಬಿದಿರೆಗೂ ಭಾರತೀಯ ಜ್ಞಾನ ಪೀಠಕ್ಕೂ ನಂಟು ಭಾರತೀಯ ಜ್ಞಾನ ಪೀಠಕ್ಕೆ ಕನ್ನಡವೇ ಸ್ಫೂರ್ತಿ | | 7 |
| ಭಾರತೀಯ ಕಲೆ ಭಾಗ - 19 ಕೃಪೆ : ಎನ್. ಮನಿಶಾಮೋಹಾರ್‌ರವರ ಭಾರತೀಯ ಕಲೆ | | 8 |
| Siddharama's Sonnalige (a Cultural Study) | ● Dr. G.N. Upadhya | 11 |
| ಸುತ್ತ-ಮುತ್ತ | | 11 |


**Rs. 5/-**


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

ಅಸೋಸಿಯೇಶನ್‌ನಲ್ಲಿ

# ಕರ್ನಾಟಕದ ಗಾನ ಕೋಗಿಲೆ ಮುಂಬೈನಲ್ಲಿ

ಮುಂಬೈನ ಮೈಸೂರು ಅಸೋಸಿಯೇಶನ್ನಿನಲ್ಲಿ ನವೆಂಬರ್ 10ರಿಂದ 17ನೇ ತಾರೀಖಿನ ವರೆಗೆ ಸಂಗೀತದ ಒಂದು ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದ ಮುಖ್ಯ ಉದ್ದೇಶ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಅಪರೂಪದ ಕೃತಿಗಳನ್ನು ಪರಿಚಯಿಸುವುದು. ಶಿಬಿರದ ಗುರುಗಳಾಗಿ ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರನ್ನು ಆಹ್ವಾನಿಸಲಾಗಿತ್ತು. 10ನೇ ತಾರೀಖು ಬೆಳಿಗ್ಗೆ 10 ಘಂಟೆಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ಪ್ರಸಾದ್ ಅವರು ಸ್ವಾಗತ ಭಾಷಣವನ್ನು ಮಾಡಿದರು. ನಂತರ ಅಂದಿನ ಮುಖ್ಯ ಅತಿಥಿಗಳಾಗಿದ್ದ ನೃತ್ಯಗಾರ್ತಿ ಶ್ರೀಮತಿ ಜಯಶ್ರೀ ರಾಜಗೋಪಾಲ್ ಅವರು ಶಿಬಿರದ ಬಗ್ಗೆ ಹಾಗೂ ಹಕ್ಕಬುಕ್ಕ ವಿದ್ಯಾರಣ್ಯರ ಕಾಲದಿಂದಲೂ ಸಂಗೀತ ಹೇಗೆ ಬೆಳೆದು ಬಂದಿತು ಎಂದು ಹೇಳಿದರು. ಶ್ರೀಮತಿ ಸುಕನ್ಯಾ ಪ್ರಭಾಕರ್ ಮತ್ತು ಜಯಶ್ರೀ ರಾಜಗೋಪಾಲ್ ದೀಪಗಳನ್ನು ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿದರು. ಪ್ರತಿದಿನವೂ 2 ತಂಡಗಳಲ್ಲಿ ತರಗತಿಗಳನ್ನು ನಡೆಸಲಾಗಿತ್ತು. ಶಿಬಿರದ ಮಧ್ಯೆ ದಿನಾಂಕ 14ರಂದು ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರ ಸಂಗೀತ ಕಛೇರಿಯನ್ನು ಏರ್ಪಡಿಸಲಾಗಿತ್ತು.

ಲಲಿತಾ ಸಹಸ್ರನಾಮದ ಶ್ಲೋಕದಿಂದ ಆರಂಭಿಸಿದರು. ನಂತರ ಕಮಾಚ್ ರಾಗದಲ್ಲಿ ಮುತ್ತಯ್ಯ ಭಾಗವತರ ''ಮಾತೇ ಮಲಯ ಧ್ವಜ''. ಎಂಬ ದರುವರ್ಣವನ್ನು ಹಾಡಿದರು. ಮೈಸೂರು ಚೌಡಯ್ಯನವರ ಕೃತಿ ''ಪ್ರಸನ್ನ ಗಣಪತೇ'' ಎಂಬ ಕೃತಿಯನ್ನು ಬಹುದಾರಿ ರಾಗದಲ್ಲಿ ಹಾಡಿದರು. ಮೈಸೂರು ವಾಸುದೇವಾಚಾರ್ಯರ ''ರಮಾರಮಣ ನಾರಾಯಣ'' ಎಂಬ ಕೃತಿಯು (ನಾಗ ಸ್ವರಾವಳಿ) ಶ್ರೋತೃಗಳ ಮನಮೆಚ್ಚಿಸಿತು. ಶ್ರೀ ಜಯಚಾಮರಾಜ ಒಡೆಯರ್ ಅವರ ಕೃತಿ ''ಕ್ಷೀರಸಾಗರ ಶಯನ'' (ಮಾಯಾ ಮಾಳವ ಗೌಳ ರಾಗ). ಮೈಸೂರು ಸದಾಶಿವರಾಯರ ಕೃತಿ ''ಗಂಗಾಧರ ತ್ರಿಪುರಹರ'' (ಪೂರ್ವಿ ಕಲ್ಯಾಣಿ). ಶ್ರೀ ಪಾದರಾಯರ ''ಇಕೋ ನೋಡು ರಂಗನಾಥನ ಪುಟ್ಟ ಪಾದ'' (ವೃಂದಾವನ) ಭಾವಪೂರ್ಣವಾಗಿ ಮೂಡಿ ಬಂತು.

ಕಬೀರದಾಸರ ಭೋಡ ದಿಯಾ ಕ್ಯೋಂ'', ಹರಪನಹಳ್ಳಿ ಭೀಮವ್ವನ ''ನಿಲ್ಲೆ ನಿಲ್ಲೆ ಕೊಲ್ಹಾಪುರ ದೇವಿ''. ಪುರಂದರದಾಸರ'' ರಾಘವೇಂದ್ರ ಭಜಿಸೋ'' ಹಾಡಿ ಕಚೇರಿಯನ್ನು ಮುಕ್ತಾಯ ಗೊಳಿಸಿದರು.

'ಕೀರ್ವಾಣಿ' ರಾಗದಲ್ಲಿ ರಾಗ - ತಾನ. ಪಲ್ಲವಿ ಎಲ್ಲರ ಮನಸೆಳೆಯಿತು. ಎಲ್ಲಕ್ಕಿಂತ ಹೆಚ್ಚಾಗಿ ಪು.ತಿ.ನ. ಅವರ ''ಕೃಷ್ಣನ ಕೊಳಲಿನ ಕರೆ...'' ಎಂಬ ಕೃತಿಯಲ್ಲಿ ಸುಕನ್ಯಾ ಅವರ ಶುದ್ಧ ಸಾಹಿತ್ಯ, ಮಧುರವಾದ ಹಾಗೂ ಇಂಪಾದ ಧ್ವನಿ, ಭಾವಪರವಶಗೊಳಿಸುವಂತೆ ಸ್ವರಗಳ ಏರಿಳಿತ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತ್ತು. ವೇಳೆ ಎಷ್ಟಿದ್ದರೂ ಸಾಲದು ಎನ್ನುವಂತಿತ್ತು. ಅವರ ಜೊತೆಯಲ್ಲಿ ಅವರ ಮಗಳು ಸುಮನ ವೇದಾಂತಂ ಸಹ ಹಾಡಿದರು. ವಿದ್ವಾನ್ ಎಸ್.ವಿ. ರಾಮಚಂದ್ರನ್ ಪಿಟೀಲಿನಲ್ಲಿ ಮತ್ತು ವಿದ್ವಾನ್ ಶಂಕರನಾರಾಯಣ್ ಮೃದಂಗದಲ್ಲಿ ಪಕ್ಕವಾದ್ಯವನ್ನೊದಗಿಸಿದರು.

ಇವರು ಆಯ್ದುಕೊಂಡ ಕೃತಿಗಳೆಲ್ಲವೂ ಅಪರೂಪದ ರಚನೆ, ರಾಗ ಹಾಗೂ ಕ್ಲಿಷ್ಟವಾದ ತಾಳಗಳಿಂದ ಕೂಡಿತ್ತು. ಕೇಳಿದಷ್ಟೂ ಇನ್ನೂ ಕೇಳುತ್ತಲೇ ಇರಬೇಕು ಎನ್ನುವ ಉತ್ಕಟ ಆಸೆಯನ್ನು ತುಂಬಿಕೊಂಡ ಸಭಿಕರ ಕರತಾಡನದಿಂದ ಸಭಾಭವನ ಬಹಳ ಹೊತ್ತಿನವರೆಗೆ ಮಾರ್ದನಿಗೊಳ್ಳುತ್ತಿತ್ತು.

- ರಮಾ ವಸಂತ್

## THE MYSORE ASSOCIATION, BOMBAY

### FORTH COMING PROGRAMMES

| Date | Programme | Time | Venue |
|---|---|---|---|
| 3rd Dec. 2003 | Accordion Duet by the Tremolos, Bangalore | 7.30 p.m. | Ground Flr. |
| 11th Dec. 2003 | Inauguration of Drama Festival<br>Exhibition of Documentary Film on B.V. Karanth<br>Exhibition of Photographs on Life of B.V. Karanth | 7.30 p.m. | Auditorium |
| 12th Dec. 2003 | Kannada Play<br>**"SEVANTHI"**<br>Presented by : Geleyara Balaga, Mandya | 7.30 p.m. | Auditorium |
| 13th Dec. 2003 | Kannada Play **"KATTHALE BELAKU"**<br>Presented by : Benaka Troupe, Bangalore | 7.30 p.m. | Auditorium |
| 14th Dec. 2003 | B.V. Karanth's Ranga Geethegalu<br>Symposium : Various Faces of B.V. Karanth<br>Kannada Play **"JO KUMARA SWAMY"**<br>Presented by : - Benaka Troupe, Bangalore | 4.30 p.m. | Auditorium |
| 15th Dec. 2003 | Kannada Play<br>**"HAYAVADANA"**<br>Presented by : Benaka Troupe, Bangalore | 7.30 p.m. | Auditorium |
| 22nd Dec. 2003 | Play Reading | 7.30 p.m. | Auditorium |

## ಜನವರಿ 3 ಮತ್ತು 4ರಂದು ನಗರದಲ್ಲಿ ಹೊರನಾಡ ಕನ್ನಡಿಗರ ಸಮಾವೇಶ

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಬರುವ ಜನವರಿ 3 ಮತ್ತು 4ರಂದು ಹೊರನಾಡ ಕನ್ನಡಿಗರ ಸಮಾವೇಶವನ್ನು ಏರ್ಪಡಿಸಲಾಗಿದೆ. ಈ ಸಮಾರಂಭದಲ್ಲಿ ತಮಿಳ್ನಾಡು, ಆಂಧ್ರ, ಕೇರಳ, ಗುಜರಾತ್, ದಿಲ್ಲಿ, ಕೊಲ್ಕತ್ತಾದ ಕನ್ನಡ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಈ ಸಮಾರಂಭದಲ್ಲಿ ಕರ್ನಾಟಕದ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ. ಸಮಾವೇಶದಲ್ಲಿ ಪರಸ್ಪರ ಪರಿಚಯ, ಹೊರನಾಡ ಕನ್ನಡಿಗರಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಏರ್ಪಾಡುಗಳು ನಡೆದಿವೆ.

ಹೊರನಾಡು ಕನ್ನಡಿಗರ ಸಮಾವೇಶದ ಸಮಿತಿಯು ತನಗೆ ತಿಳಿದಿರುವ ಎಲ್ಲಾ ಕನ್ನಡ ಸಂಸ್ಥೆಗಳನ್ನು ಈಗಾಗಲೇ ಸಂಪರ್ಕಿಸಿ ಎಲ್ಲರನ್ನು ಒಳಗೊಂಡು ಈ ಸಮಾವೇಶದ ಸಿದ್ಧತೆಗಳನ್ನು ನಡೆಸುತ್ತಿದೆ. ಈ ಬೃಹತ್ ಸಮಾರಂಭಕ್ಕೆ ಜನಸಹಾಯ ಬಹಳ ಬೇಕಾಗಿರುವುದರಿಂದ ಸದಸ್ಯರು ಮುಂದೆ ಬಂದು ಸಹಕರಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಕೋರಿಕೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಅಸೋಸಿಯೇಶನ್‌ನಲ್ಲಿ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸ : ಹೊರನಾಡ ಕನ್ನಡಿಗರ ಸಮಾವೇಶ ಸಮಿತಿ, 393 ಭಾವುದಾಜಿ ರಸ್ತೆ, ಮಾಟುಂಗಾ, ಮುಂಬಯಿ-400 0019. ಫೋನ್ : 24024647/24037065

# ಅಧ್ಯಯನ ಶಿಬಿರ - ಒಂದು ವರದಿ

✍ ಶ್ಯಾಮಲಾ ರಾಧೇಶ್

ದಿನಾಂಕ 8-10-2003ರ ಬೆಳಿಗ್ಗೆ 10.30ಕ್ಕೆ ಮೈಸೂರು ಅಸೋಸಿಯೇಶನ್‌ನಲ್ಲಿ ವಿದ್ಯಾರ್ಥಿಗಳಿಗೆ ಸಂಭ್ರಮವೋ ಸಂಭ್ರಮ. ಅದು ಮಹಾರಾಜ ''ಜಯಚಾಮರಾಜೇಂದ್ರ ಒಡೆಯರ'' ಅವರ ಕೃತಿಗಳ ಅಧ್ಯಯನ ಶಿಬಿರದ ಆರಂಭ. ಅವುಗಳನ್ನು ಕಲಿಸುವುದಕ್ಕಾಗಿ ಮೈಸೂರಿನಿಂದ ವಿದೂಷಿ ಶ್ರೀಮತಿ ಡಾ. ಸುಕನ್ಯಾ ಪ್ರಭಾಕರ್ ಅವರು ಆಗಮಿಸಿದ್ದರು. ಖ್ಯಾತ ನೃತ್ಯಗಾರ್ತಿ ಶ್ರೀಮತಿ ಜಯಶ್ರೀ ರಾಜಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಶಿಬಿರದ ಪ್ರಾರಂಭ. ಅವರು ದೀಪ ಬೆಳಗಿಸುವುದರೊಂದಿಗೆ ಶಿಬಿರವನ್ನು ಉದ್ಘಾಟಿಸಿ ಶಿಬಿರವು ಯಶಸ್ವಿಯಾಗಲಿ ಎಂದು ಹಾರೈಸಿದರು.

ವಿದ್ಯಾರ್ಥಿಗಳಿಗೆಲ್ಲಾ ಒಂದು ವಿಧವಾದ ಪುಳಕ, ಸಂತೋಷ... ವಿವರಿಸಲಾಗದ ಅನುಭವ. ಮೊದಲನೆಯದಾಗಿ ಗಣಪತಿಯ ಸ್ತುತಿಯೊಂದಿಗೆ ಪ್ರಾರಂಭಿಸಿದರು. ಅಷ್ಟೇನೂ ಪ್ರಚಲಿತವಲ್ಲದ ರಾಗ ವಕುಳಾಭರಣದ ಕೃತಿಯೊಂದಿಗೆ ಕಲಿಕೆಯನ್ನಾರಂಭಿಸಿದ ವಿದ್ಯಾರ್ಥಿಗಳಿಗೆ, ಎಂತಹ ಕೃತಿಯನ್ನಾದರೂ ಸಲೀಸಾಗಿ ಕಲಿಯಬಹುದು ಎಂಬುದನ್ನು ಮೊದಲನೆಯ ದಿನವೇ ಸುಕನ್ಯಾ ಅವರು ಕಲಿಸಿ ತೋರಿಸಿಕೊಟ್ಟರು. ಪ್ರತಿಯೊಂದು ಹಂತದಲ್ಲೂ ಸ್ವರ ಮತ್ತು ಸಾಹಿತ್ಯ ಹೇಗೆ ಜೊತೆ ಜೊತೆಯಾಗಿ ಸಾಗುತ್ತದೆ. ಸಾಹಿತ್ಯದ ಅರ್ಥ ಇವುಗಳನ್ನೆಲ್ಲಾ ಬಹಳ ಚೆನ್ನಾಗಿ ವಿವರಿಸಿದರು.

ಉದಾ : 'ಪರಿಪಾಹಿಮಾಂ' ಭಕ್ತನು ಭಕ್ತಿಯಿಂದ ತಲೆಬಾಗಿ, ವಿನಯದಿಂದ ಪಾಲಿಸು ಎಂದು ಪ್ರಾರ್ಥಿಸುತ್ತಾನೆ. ಸ್ವರವೂ ಕೂಡಾ ಹಾಗೆಯೇ ಷಡ್ಜದಲ್ಲಿಯೇ ಬರುತ್ತದೆ. ಮತ್ತೊಂದು ಉದಾ : ''ಹರಿದ್ರಾ ಕುಂಕುಮ ಸಮ್ಮಿಶ್ರಿತ ಚಂದನಾನುಲಿಪ್ತ ಗಾತ್ರ'' ಎಂಬಲ್ಲಿ ಸ್ವರವು ತಾರಸ್ಥಾಯಿಯಿಂದ ಪ್ರಾರಂಭಿಸಿ ಷಡ್ಜದವರೆಗೂ ಬರುತ್ತದೆ. ಹಾಗೆಯೇ ಸಾಹಿತ್ಯದ ಅರ್ಥವೂ ಕೂಡಾ ಅರಿಶಿನ ಮತ್ತು ಕುಂಕುಮವನ್ನು ಗಣಪತಿಗೆ ಹಣೆಯಿಂದ ಪ್ರಾರಂಭಿಸಿ



*ಸಂಗೀತ ಅಧ್ಯಯನ ಶಿಬಿರದ ಉದ್ಘಾಟನೆಯ ಅಂಗವಾಗಿ ಶ್ರೀಮತಿ (ಡಾ.) ಸುಕನ್ಯಾ ಪ್ರಭಾಕರ್ ಅವರು ದೀಪ ಬೆಳಗಿಸುತ್ತಿರುವುದು.*

ಚಂದನ ಮಿಶ್ರಣವನ್ನು ಶರೀರಕ್ಕೆಲ್ಲಾ ಲೇಪಿಸಿ ಪಾದಗಳಿಗೆ ಬರುವಂತೆ ಹಾಗೆಯೇ ''ವಕುಳಾಭರಣಶೋಭಿತ''... ಎನ್ನುವಾಗ ಆ ಸ್ವರಗಳ ಸಂಚಾರವೂ ಕೂಡಾ ಬಳುಕಾಡುತ್ತದೆ.

ಎರಡನೆಯದು ಹಂಸನಾದಿನಿಯಲ್ಲಿ ಶಾರದೆಯ ಕೃತಿ. ಪುರುಷದೇವರಲ್ಲಿ ಗಣಪತಿ ವಿದ್ಯಾದಾಯಕನಾದರೆ, ಸ್ತ್ರೀ ದೇವತೆಯರಲ್ಲಿ ಶಾರದೆಗೇ ಆ ಸ್ಥಾನ. ಶಾರದ ಎಂಬ ಪದವೇ ಜ್ಞಾನವನ್ನು ನೀಡುವವಳು..., ಅಜ್ಞಾನವನ್ನು ತೊಡೆದು ಹಾಕುವವಳು'' ಎಂದು ರಾಗದ ಆಯ್ಕೆಯಲ್ಲಿಯೂ ಒಡೆಯರು ತಮ್ಮ ಜಾಣ್ಮೆ ತೋರಿದ್ದಾರೆ. ಹಂಸ, ''ಪರಬ್ರಹ್ಮ ತತ್ವದ ಸಂಕೇತ'' ಬ್ರಹ್ಮನ ರಾಣಿ ''ಹಂಸನಾದಿನಿಯೂ ಕೂಡಾ. ಒಂದು ಕಡೆ ಬ್ರಹ್ಮಮಾನಸ ಸೋಲ್ಲಾಸಿನೀ, ಮಾನಿನೀ'' ಎಂದಿದೆ. ಅರ್ಥವೂ ಅಷ್ಟೇ ಸುಂದರವಾಗಿದೆ. ಸರೋವರದಲ್ಲಿ ಹಂಸ ಈಜಾಡುವಂತೆ ಬ್ರಹ್ಮನ ಮಾನಸ ಸರೋವರದಲ್ಲಿ ಈಜಾಡುವ ದೇವಿಗೆ ವಂದನೆ ಎಂದು ತಲೆಬಾಗಿದ್ದಾರೆ. ಹಾಗೆಯೇ ಮುಂದೆ ''ಮೂಕ ವಾಕ್ಪ್ರದಾನ ಸುವಿಖ್ಯಾತಾಂ'' ಎಂದರೆ ವಾಗ್ಗೇಯಕಾರರ ದೃಷ್ಟಿಯಲ್ಲಿ ವಾಗ್ಗೇಯತ್ವವನ್ನು ಕರುಣಿಸುವವಳೂ, ಮೂಲ ಪ್ರಕೃತಿಯೇ ಅವಳು, ಬ್ರಹ್ಮನ ಸೃಷ್ಟಿಯ ಮೂಲವೇ ಶಾರದೆ.

ಮೂರನೆಯದು ನಾಟರಾಗದ ಲಕ್ಷ್ಮೀಪರ ಕೃತಿ. ಇದರಲ್ಲಿ ತ್ಯಾಗರಾಜರ ಪಂಚರತ್ನ ಕೃತಿಗಳ ಪ್ರಭಾವವನ್ನು ಕಾಣಬಹುದು. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಎನ್ನುವಂತೆ ಚಿಟ್ಟೇ ಸ್ವರವನ್ನೂ ಕೂಡಾ ರಚಿಸಿದ್ದಾರೆ. ಈ ಕೃತಿಯ ಪ್ರತಿಯೊಂದು ಸಾಹಿತ್ಯವೂ ಕ್ಷೀರ ಸಾಗರ ಮಥನದ ಕಥೆಯನ್ನು ಸಾರುತ್ತದೆ. ಉದಾ : ''ಸಮುದ್ರ ಮಥನ ಕಾಲೋದ್ಭವೇ ಮಹಾಲಕ್ಷ್ಮೀ ಮೋಹಿನೀ ರೂಪಯುತೇ'' ವಿಷ್ಣು ಪುರಾಣದ ಪ್ರಕಾರ ಕ್ಷೀರ ಸಾಗರವನ್ನು ಮಥಿಸಿದಾಗ ಕಾಮಧೇನು ಐರಾವತ, ಕಲ್ಪವೃಕ್ಷ, ಹಾಲಾಹಲ...




*ಮೈಸೂರು ಅಸೋಸಿಯೇಷನ್‌ನಲ್ಲಿ ನಡೆದ ಸಂಗೀತ ಕಚೇರಿಯಲ್ಲಿ ಶ್ರೀಮತಿ (ಡಾ.) ಸುಕನ್ಯಾ ಪ್ರಭಾಕರ್ ಅವರೊಡನೆ ಅವರ ಮಗಳು ಸುಮನ ವೇದಾಂತ ಮತ್ತು ಪಕ್ಕವಾದ್ಯದಲ್ಲಿ ಪಿಟೀಲಿನಲ್ಲಿ ಎಸ್.ಪಿ. ರಾಮಚಂದ್ರನ್ ಮತ್ತು ಮೃದಂಗದಲ್ಲಿ ಶಂಕರ್ ನಾರಾಯಣನ್.*

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For INDIAN AIRLINES & JET AIRLINES**

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750



*ಸಂಗೀತ ಅಧ್ಯಯನ ಶಿಬಿರದ ಸಮಾರೋಪದ ಸಂದರ್ಭದಲ್ಲಿ ಶ್ರೀಮತಿ (ಡಾ.) ಸುಕನ್ಯಾ ಪ್ರಭಾಕರ್, ಸಂಗೀತ ಅಧ್ಯಯನ ಶಿಬಿರದ ವಿದ್ಯಾರ್ಥಿನಿಯರು, ವಿದ್ಯಾರ್ಥಿಗಳೊಂದಿಗೆ ಶ್ರೀ ಜಯಚಾಮರಾಜ ಒಡೆಯರ್ ಅವರ ಕೃತಿಗಳನ್ನು ಪ್ರಸ್ತುತ ಪಡಿಸುತ್ತಿದ್ದಾರೆ.*

ಮುಂತಾದವು ಮೂಡಿ ಬರುತ್ತದೆ. ಇವುಗಳೆಲ್ಲದರ ಜೊತೆಗೆ ಹಣ ಮಾಲೆ ಹಿಡಿದ ಕನ್ಯೆಯೂ ಉದಿಸುತ್ತಾಳೆ. ಅವಳೇ ಮಹಾಲಕ್ಷ್ಮಿ. ಅವಳ ರೂಪಕ್ಕೆ ಮೋಹಿತರಾಗಿ ಸುರಾಸುರಿಬ್ಬರೂ ಅವಳನ್ನು ಬೆನ್ನಟ್ಟಿದಾಗ ಆಕೆ ಎಸೆದ ಹಾರ ಮಹಾವಿಷ್ಣುವಿನ ಕೊರಳಲ್ಲಿ, ಅದೇ ಶ್ರೀವತ್ಸ.

ಮುಂದಿನ ಕೃತಿ ''ಹಾಟಕಾಂಬರಿಯಲ್ಲಿ ಹಾಟಕೇಶ್ವರಂ...'' ಇದು ಶಿವ ಕೃತಿ. ಇಲ್ಲಿ 'ಹಾಟಕ' ಎಂದರೆ 'ಚಿನ್ನ' ಅಂಬರ ಎಂದರೆ 'ಆಕಾಶ' ಆಕಾಶವನ್ನೇ ಬಟ್ಟೆಯಂತೆ ಚಿನ್ನದ ಕೆಳು ಪರದೆಯನ್ನು ಹೊಂದಿರುವ ಈಶ್ವರ ಎಂದು ಅರ್ಥೈಸಿದರು. ಮತ್ತೂ ಮುಂದೆ ಹೋಗಿ ಚಿನ್ನ ಎಂದಾಗ ಭೂಮಿ ಎಂದೂ, ಅಂಬರ ಎಂದರೆ ಆಕಾಶವೆಂದೂ ಆದಾಗ, ಭೂಮ್ಯಾದಿ ತತ್ವಗಳನ್ನು ಒಡೆಯರು ಬಳಸಿರುವುದು ತಿಳಿಯುತ್ತದೆ. ಪಂಚ ಭೂತಗಳಿಗೆ ಒಡೆಯನಾದ ಹಾಟಕೇಶ್ವರನ ದೇಹವು ಸ್ಪಟಿಕದಂತಿದ್ದು ಹಾರಗಳಿಂದ ಅಲಂಕೃತವಾಗಿದೆ ಎಂದಿದ್ದಾರೆ. ''ಹಾಲಾಸ್ಯನಗರಾಧೀಶ್ವರಕ'' ಹಾಲಾಸ್ಯ ಕ್ಷೇತ್ರ ಚಿಂದಬರ. ಚಿದಂಬರದ ಆಲಯದಲ್ಲಿ ನಟರಾಜ ಮೂರ್ತಿಯ ಹಿಂದೆ ತೆರೆ ಕಟ್ಟಿರುತ್ತದೆ. ಉತ್ಸವಾದಿ ದಿನಗಳಲ್ಲಿ ತೆರೆ ಸರಿಸಿದಾಗ ತೆರೆಯ ಹಿಂದೆ ಏನೂ ಇರುವುದಿಲ್ಲ. ಅದು ಶೂನ್ಯ ಪ್ರದೇಶ. ನಿರಭ್ರ ಆಕಾಶ. ಅದೇ ಸ್ಪಟಿಕ ಸದೃಶ. ''ಇದೇ ಚಿದಂಬರ ರಹಸ್ಯ''.

ಮುಂದಿನ ಕೃತಿ ಭೋಗ ವಸಂತದ ''ಅಂಬಾ ಶ್ರೀ ರಾಜರಾಜೇಶ್ವರಿ'' ಈ ಹೆಸರೇ ಸೂಚಿಸುವಂತೇ ಆ ರಾಜರಾಜೇಶ್ವರಿಯನ್ನು ವರ್ಣಿಸುವಾಗ ಉಂಟಾಗುವ ಆ ಸುಖ, ಆನಂದ ಅವರ್ಣನೀಯ. ಆಸುಖಾನುಭವ ಈ ಕೃತಿಯಲ್ಲಿ ಮೂಡಿ ಬಂದಿದೆ. ಈ ಕೃತಿಯಲ್ಲಿ ಮೊದಲಿನಿಂದ ಕೊನೆಯವರೆಗೂ ಕ್ರಿಯಾಪದದ ಪ್ರಯೋಗವೇ ಕಾಣಬರುವುದಿಲ್ಲ 'ಅಂಬುಜಾಕ್ಷಿ ಶ್ರೀ... ಕಾಮಾಕ್ಷಿ'' ಎನ್ನುವ ಕಡೆ ಕಮಲದ ದಳಗಳು ಅರಳುವಂತೆ ಸ್ವರಗಳೂ ಕೂಡಾ ಅರಳುತ್ತಾ ಹೋಗುತ್ತವೆ. ಮುಂದೆ ''ಶೋಕ ಶಮನ ಕಾರಿಣಿ ಕಲ್ಯಾಣಿ ಶಾಂಭವಿ ರಮಾ ಧೀಶಕ್ತಿ ವಾಸಿನಿ... ಇಲ್ಲಿ ಶಾಂಭವಿ ಪಾರ್ವತಿ, ರಮಾ ಲಕ್ಷ್ಮೀ, ಧೀಶಕ್ತಿ - ಸರಸ್ವತಿ ಪರಾಶಕ್ತಿಯ ಮೂರು ರೂಪಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಮುಂದಿನ ಕೃತಿ ಕಲ್ಯಾಣ ವಸಂತದ ''ಶ್ರೀ ರಂಗನಾಥ ಪಾಹಿಮಾಂ '' ಇವರ ಸ್ವರ ಮತ್ತು ಕೃತಿ ವಿಶ್ಲೇಷಣೆ ನೋಡಿದಾಗ ಮಲಗಿರುವ ಚಿಕ್ಕ ಮಕ್ಕಳನ್ನು ಹೇಗೆ ಪ್ರೀತಿಯಿಂದ ಮೃದವಿ ಎಬ್ಬಿಸುತ್ತಾರೋ ಹಾಗೆಯೇ ಒಂದು ಸಂಗತಿಯಿಂದ ಮತ್ತೊಂದು ಸಂಗತಿಗೆ ಮೃದುವಾದ ಏರಿಳಿತವನ್ನು ಗಮನಿಸಬಹುದು. ಹಾಗೆಯೇ ಆ ಸ್ವರಗಳು ತೊಟ್ಟಿಲನ್ನು ತೂಗುವ ರೀತಿ ಹಿಂದೆ ಮುಂದೆ ಆಡುತ್ತದೆ. ಹಾಗೆಯೇ ಅನುಪಲ್ಲವಿಯಲ್ಲಿ ''ವಂದಿತ ಚರಣಾಂ'' ಚರಣ ಎನ್ನುವಾಗ ಪಾದ ಕೆಳಗೇ ಇರುವುದರಿಂದ ವಂದಿಸಬೇಕಾದರೆ ಬಗ್ಗಲೇ ಬೇಕಾಗುತ್ತದೆ. ಆದ್ದರಿಂದಲೇ ಅಲ್ಲಿ ಸ್ವರ ಸಂಚಾರವೂ ಕೂಡಾ ಅವರೋಹಿತವಾಗಿದೆ. ಪಲ್ಲವಿಯಲ್ಲಿ ಸೃಷ್ಟಿಯು, ಅನುಪಲ್ಲವಿಯಲ್ಲಿ ಸ್ಥಿತಿಯು, ಚರಣದಲ್ಲಿ ಲಯವೂ ಕಂಡು ಬರುತ್ತದೆ.

ಶಿಬಿರದ ಕೊನೆಯ ಕೃತಿ ನಾದನಾಮಕ್ರಿಯಾ ರಾಗದ 'ಶಿವ ಶಿವ ಶಿವಭೋ' ಈ ಕೃತಿಯಲ್ಲಿ ಮೊದಲಿಗೇ ಶಿವನನ್ನು ಮೂರು ಬಾರಿ ಜಪಿಸಿದ್ದಾರೆ. ಶಿವಾದ್ವೈತದ ಪ್ರಕಾರ ಶಿವನನ್ನು ಮೂರು ಬಾರಿ ಜಪಿಸಿದರೆ ಹೊರಹೊಮ್ಮುವ ಬೆಳಕೇ ಮಹಾದೇವ ಅವನನ್ನು ''ಮಾಮಾಪರಾಧಂ ಕ್ಷ... ಮ.. ಸ್ವ..'' ಎಂದು ಬೇಡಿಕೊಳ್ಳುತ್ತಾರೆ. ಚರಣದಲ್ಲಿ ''ಪ್ರಳಯಕಾಲ ಜಗದ್ರಕ್ಷಕ (ಜಗದ್ಭಕ್ಷಕ) ಶಿವನು ಪ್ರಳಯಕಾಲದಲ್ಲಿ ರಕ್ಷಕನೂ ಆಗುತ್ತಾನೆ. ಹಾಗೆಯೇ ಭಕ್ಷಕನೂ ಆಗುತ್ತಾನೆ. ಹಾಗೆಯೇ ಮುಂದೆ ಸಾಗಿ ಕಾಮೇಶ್ವರೀಂ ವಲ್ಲಭ. ಕುಬೇರಮಿತ್ರ. ಕಪಾಲಿ'' ಎಂದು ಹೇಳುತ್ತಾರೆ. ಕಾಮೇಶ್ವರಿಯ ವಲ್ಲಭನಾದ ಶಿವನು ಕುಬೇರನ ಮಿತ್ರನೂ ಕೂಡಾ ಆದರೂ ಕಪಾಲವನ್ನು ಹಿಡಿದು ಭಿಕ್ಷೆ ಬೇಡುತ್ತಾನೆ. ಇಲ್ಲಿ ಬೇಡುವುದು ಎಂಬುದು ಅಂತ ರಂಗದ ಆರ್ತತೆ.

ಈ ಮೇಲೆ ಬರೆದಿರುವ ಕೃತಿಗಳ ವಿಶ್ಲೇಷಣೆ. ಅರ್ಥ ಎಲ್ಲವೂ ಕೂಡಾ ಶಿಬಿರದ ಸಮಯದಲ್ಲಿ ಡಾ. ಸುಕನ್ಯಾ ಅವರು ತಿಳಿಸಿರುವುದು. ಪ್ರತಿಯೊಂದು ವಿಷಯವನ್ನು ಕೂಲಂಕುಷವಾಗಿ, ಬೇಜಾರಿಲ್ಲದೆ, ಎಷ್ಟು ಸಲ ಕೇಳಿದರೆ ಅಷ್ಟು ಸಲ ಹೇಳಿ ಎಲ್ಲರಿಗೂ ಇನ್ನೂ... ಇನ್ನೂ... ಕಲಿಯಬೇಕೆಂಬ ಆಸೆ ತುಂಬಿದ್ದಾರೆ. ಒಡೆಯರ ಕೃತಿಗಳನ್ನು ಕಲಿತರೆ ಸುಕನ್ಯಾಜಿ. ಅವರಿಂದಲೇ ಕಲಿಯಬೇಕೆಂಬ ಭಾವನೆ ಬಂದಿದ್ದರೆ ಅದರಲ್ಲಿ ತಪ್ಪೇನಿಲ್ಲ...

17-11-2003ರಂದು ಶಿಬಿರದ ಮುಕ್ತಾಯ ಅಂದು ಸಂಜೆ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲಾ ಒಟ್ಟಾಗಿ ಶಿಬಿರದಲ್ಲಿ ಕಲಿತ ಕೃತಿಗಳನ್ನು ಹಾಡಿದರು. ಡಾ. ಸುಕನ್ಯಾ ಅವರೂ ಕೂಡಾ ಅವರೊಂದಿಗೇ ಕುಳಿತು ಸ್ವಲ್ಪ ಕೇಳಿ. ಸ್ವಲ್ಪ ಹಾಡಿ ಕಿವಿಗೆ ಇಂಪೆನಿಸಿದರು. ಹಾಡಿದ ಬಳಿಕ ಶಿಬಿರದಲ್ಲಿ ಭಾಗವಹಿಸಿದವರೆಲ್ಲರಿಗೂ ಮೈಸೂರು ಅಸೋಸಿಯೇಶನ್ ಅವರು Certificate ಕೊಟ್ಟರು. ನಂತರ ಅಂದಿನ ಅಧ್ಯಕ್ಷ ಸ್ಥಾನದಲ್ಲಿ Prof. ಶ್ರೀನಿವಾಸ್‌ರವರು ಸಭೆಯನ್ನುದ್ದೇಶಿಸಿ ಒಂದೆರಡು ಮಾತನಾಡಿದರು. ನಂತರ ಡಾ. ಸುಕನ್ಯಾರವರು ಸಭೆಯನ್ನುದ್ದೇಶಿಸಿ ಮಾತನಾಡಿರು. ''ನನಗಾಗಿರುವ ಅತಿಯಾದ ಆನಂದದಿಂದ ಮಾತೇ ಹೊರಡದಿರುವ ಸ್ಥಿತಿಗೆ ತಲುಪಿಸಿದ್ದೇನೆ. ನಿಮ್ಮೆಲ್ಲರ ಪ್ರೀತಿಯೊಂದೇ 'ನನಗೆ ಸಾಕು. ಆ ಪ್ರೀತಿಯೊಂದನ್ನೇ ಮನಸ್ಸು ಹೃದಯದ ತುಂಬಾ ತುಂಬಿಕೊಂಡು ಹೋಗುತ್ತಿದ್ದೇನೆ'' ಎಂದರು. ಪ್ರತೀದಿನವೂ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ವಿಧವಾದ ಭೋಜನ ಮಾಡಿ ಮತ್ತೊಂದು ರೀತಿಯಲ್ಲೂ ಹೊಟ್ಟೆ ತುಂಬಿದೆ ಎಂದು ತಿಳಿಸಿ ಸಭೆಯಲ್ಲಿ ನಗೆ ಚೆಲ್ಲುವಂತೆ ಮಾಡಿದರು. ಇಂತಹ ಒಳ್ಳೆಯ ಕಾರ್ಯ ಮಾಡಿದ ಅಸೋಸಿಯೇಶನ್‌ಗೆ ವಂದನೆಯನ್ನು ಸಲ್ಲಿಸಿದರು.

ನಂತರ ಭಾಗವಹಿಸಿದ್ದವರಲ್ಲಿ ಅತ್ಯಂತ ಹಿರಿಯ ವಿದ್ಯಾರ್ಥಿನಿಯಾಗಿದ್ದ ಶ್ರೀಮತಿ ಪಲ್ಲವಿ ವಿಜಯಲಕ್ಷ್ಮಿನಾಥನ್ ಅವರು ಒಂದೆರಡು ಮಾತನಾಡಿ ಅವರ ಅನುಭವಗಳನ್ನು ಸಂತೋಷವನ್ನು ಇತರರೊಡನೆ ಹೇಳಿಕೊಂಡರು. ಇಂತಹ ಒಳ್ಳೆಯ ಕೃತಿಗಳನ್ನು ಇಂತಹ ಒಳ್ಳೆಯ ಸಂಗೀತಗಾರರಿಂದ ಕಲಿಯಲು ವ್ಯವಸ್ಥೆ ಮಾಡಿದ್ದ ಮೈಸೂರು ಅಸೋಸಿಯೇಶನ್‌ನ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಅಂತ್ಯದಲ್ಲಿ ಶ್ರೀಯುತ ಮಂಜುನಾಥಯ್ಯನವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. •

# ಸಂಗೀತ ಶಿಬಿರದ ಅನುಭವ - ಅನಿಸಿಕೆ

ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ಮೈಸೂರು ಶ್ರೀ ವಾಸುದೇವಾಚಾರ್ಯ ಹಾಗೂ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಕೃತಿಗಳನ್ನು ಪರಿಚಯಿಸುವ ಮೂಲಕ, ವಿನೂತನ ರೀತಿಯಲ್ಲಿ ಸಮಾರಂಭವನ್ನು ನೆರವೇರಿಸಿ, ಯಶಸ್ವಿಯಾದುದಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಶಿಬಿರವನ್ನು ಬೆಳಿಗ್ಗೆ ಹಾಗೂ ಸಾಯಂಕಾಲ 2 ಬಾರಿ ಪ್ರತಿನಿತ್ಯ (7 ದಿನಗಳು) ನಡೆಸುತ್ತಿದ್ದರಿಂದ, ಮುಂಬಯಿಯ ಹಲವಾರು ಸಂಗೀತ ಶಿಕ್ಷಕರಲ್ಲದೇ ಗೃಹಿಣಿಯರೂ, ವಿದ್ಯಾರ್ಥಿಗಳಲ್ಲದೇ ಇನ್ನಿತರ ಉದ್ಯೋಗದಲ್ಲಿರುವ ಸಂಗೀತಾಸಕ್ತರೂ ಭಾಗವಹಿಸಲು ಅನುಕೂಲವಾಯಿತು. ಭಾಷಾಭೇದ, ವಯೋಭೇದವಿಲ್ಲದೇ ಕೇವಲ ಸಮಾನ ಆಸಕ್ತಿ ಇರುವ ಉತ್ಸಾಹಭರಿತ ವಿದ್ಯಾರ್ಥಿಗಳು ಸಾಧಾರಣ 20-30 ಜನ ಪ್ರಯೋಜನ ಪಡೆದುಕೊಂಡೆವು. ಈ ಶಿಬಿರಕ್ಕೆ "Advanced Course" ಎಂದದ್ದೂ ಅನ್ವರ್ಥವಾಗಿತ್ತು. ಕಾರಣ, ಮಾರ್ಗದರ್ಶನವಿಲ್ಲದೆ ಹಾಡಲಾಗದ ಅಪರೂಪದ ಕೃತಿಗಳು ಹೊಸರಾಗಗಳ ಕೃತಿಗಳ ಪರಿಚಯ ಮಾಡಿಸಿದ್ದಾರೆ. ವಾಗ್ಗೇಯಕಾರರು ಕೃತಿಯನ್ನು ರಚಿಸಿದ ಸಂದರ್ಭ, ಪದಗಳ ಅರ್ಥವಿವರಣೆ, ಸ್ಪಷ್ಟ ಉಚ್ಚಾರಣೆ, ರಾಗದ ಹರವು, ಸೂಕ್ಷ್ಮತೆ, ಸ್ವರದ ಏರಿಳಿತ, ಕೃತಿಯೊಡನೆ ತಾದಾತ್ಮ್ಯತೆ, ಕ್ಲಿಷ್ಟ ತಾಳಗಳ ಪರಿಚಯ ಹೀಗೆ ಪ್ರತಿಯೊಂದು ವಿವರಗಳನ್ನು ಸರಳವಾಗಿ ಮನಮುಟ್ಟುವಂತೆ ತಿಳಿಸಿ, ಕಲಿಸಿದ್ದಾರೆ. ನಾವು ಕಲಿತಿದ್ದು 5-6 ಕೃತಿಗಳಾದರೂ, ಆಸಂದರ್ಭದ ಅಲೌಕಿಕ ಅನುಭವ ಮಾತ್ರ ಅವಿಸ್ಮರಣೀಯ, ಅವರ್ಣನೀಯ

नाहम् वसामी वैकुंठे, ना योगिना हृदये ।
मद् भक्ताः यत्र गायन्ति, तत्र तिष्ठामि नारदः ।।

ಎನ್ನುವಂತೆ, ನಾದೋಪಾಸನೆಯನ್ನೇ ನಮ್ಮ ಇಬ್ಬರೂ ಗುರುಗಳು ಮಾಡಿದ್ದರು. ಕೃತಿಕಾರರು ದ್ವೈತ ಅದ್ವೈತ ತತ್ವಗಳನ್ನು, ಶ್ರೀವಿದ್ಯಾ ಉಪಾಸನೆ ಮುಂತಾದ ಗಹನವಾದ ವಿಷಯಗಳನ್ನು ತಮ್ಮ ಕೃತಿಗಳಲ್ಲಿ ಹೇಗೆ ಅಳವಡಿಸಿದ್ದಾರೆ. ಅವನ್ನು ನಾವು ಹೇಗೆ ಹಾಡಬೇಕೆಂದು (ಸ್ವರಏರಿಳಿತ, ಉಸಿರಿನ ಬಗ್ಗೆ ವಿವರವಾಗಿ) ಕಲಿಸಿದಾಗ, ನಾವು ಹೆಚ್ಚಿನವರು ಅಲೌಕಿಕ ಆನಂದದಿಂದ ರೋಮಾಂಚನಗೊಂಡು ಕಣ್ಣೀರಿಳಿಸಿದ್ದೇವೆ. ಬಹುಶಃ ನಾದೋಪಾಸನೆಯ ಆ ಅಲೌಕಿಕ ಆನಂದವನ್ನು ಅನುಭವಿಸಿಯೇ ಅರಿಯಬೇಕು.

ಶಿಬಿರದಲ್ಲಿ ನಮಗೆ ನಾದದರ್ಶನದ ಮೂಲಕ ಮಾರ್ಗದರ್ಶನ ಮಾಡಿದ ನಮ್ಮ ಗುರುಗಳ ಬಗ್ಗೆ ಬರೆದಷ್ಟು ಕಡಿಮೆ. ಕರ್ನಾಟಕ ಸಂಗೀತದ ವಿದ್ವನ್ಮಣಿಗಳಾದ ಇಬ್ಬರೂ ಗುರುಗಳ ಕಾರ್ಯಕ್ರಮ ಕೇಳಿದ ಸಂಗೀತ ರಸಿಕರಿಗೆ ಅವರ ಪ್ರತ್ಯಕ್ಷ ಅನುಭವವಾಗಿರುತ್ತದೆ.

ಅವರವರ ಭಾವಕ್ಕೆ, ಅವರವರ ಭಕುತಿಗೆ ।
ಅವರವರ ತೆರನಾಗಿ ಇರುತಿಹನು ಶಿವಯೋಗಿ ।
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರೋ ಅವರಂತೆ ತೋರುವನು",
ಎನ್ನುವಂತೆ

ಗುರು ಶ್ರೀ ಪದ್ಮನಾಭಸರ್ ಹಾಗೂ ಗುರು ಶ್ರೀಮತಿ ಸುಕನ್ಯಾ ಮೇಡಂರವರು ಪ್ರತಿಯೊಂದು ಕೃತಿಗಳನ್ನು ಹೇಳಿಕೊಡುವಾಗ, ರಾಗ ಭಾವ ತುಂಬಿ ಹಾಡಿದಾಗ ನಾದೋಪಾಸನೆಯ ಮೂಲಕ ಗಣಪತಿ, ಶ್ರೀ ಹರಿ, ಶ್ರೀರಾಮ, ದೇವಿ ಅಂಬಾ, ಗುರುಗಳನ್ನು, ಒಬ್ಬೊಬ್ಬರನ್ನು ಶಾಸ್ತ್ರೋಕ್ತವಾಗಿ ಆರಾಧಿಸುವ ಅನುಭವ, ಕಣ್ಣು ಮುಚ್ಚಿ ಏಕಾಗ್ರತೆಯಿಂದ ಕೇಳುವಾಗ ಗುರುಗಳೇ ಆ "ರಾಗದೇವತೆ" ಆಗಿದ್ದಾರಾ ಎಂದೂ ನಮಗೆ ದಿಗ್ಭ್ರಮೆ ಆಗಿದೆ.

ಗುರುಗಳು (ಇಬ್ಬರೂ) ಕಲಿಸಿದ ಕೃತಿಗಳನ್ನು ಯಾವುದೇ ಲೋಪವಿಲ್ಲದಂತೆ ಸ್ವರ, ರಾಗ, ತಾಳ, ಅರ್ಥ ಸಹಿತವಾಗಿ ಶುದ್ಧವಾಗಿ ಹಾಡುವಂತೆ "ಸಂಗೀತ ಶಾರದೆ" ನಮಗೆಲ್ಲಾ ಅನುಗ್ರಹಿಸಲಿ ಎಂದೂ ಪ್ರಾರ್ಥಿಸುವೆನು. ಬಹುಶಃ ಅದೇ ನಾನು ನಮ್ಮ ಹಿರಿಯ ಪೂಜ್ಯ ವಾಗ್ಗೇಯಕಾರರಿಗೂ, ಪೂಜ್ಯ ಗುರುಗಳಿಬ್ಬರಿಗೂ ಸಲ್ಲಿಸುವ "ನಮ್ಮ ಗುರುಕಾಣಿಕೆ"

ಮಾಯಾನಗರಿ ಮುಂಬಯಿಯಲ್ಲಿ (ಕರ್ನಾಟಕದಿಂದ ದೂರವಿದ್ದರೂ) ಇಂತಹ ಉತ್ತಮ ಹಾಗೂ ಉನ್ನತ ಮಟ್ಟದ ಸಂಗೀತವನ್ನು ಕೇಳುವ ಹಾಗೂ ಕಲಿಯುವ ಸುಯೋಗವನ್ನು ಕಲ್ಪಿಸಿಕೊಟ್ಟಂತಹ ನಮ್ಮ ಮೆಚ್ಚಿನ ಮೈಸೂರು ಅಸೋಸಿಯೇಷನ್ ಪದಾಧಿಕಾರಿಗಳಿಗೆ ಧನ್ಯವಾದಗಳು. ಮುಂದೆಯೂ ಇದೇ ರೀತಿಯ ಅವಕಾಶವನ್ನು ವರ್ಷಕ್ಕೊಮ್ಮೆಯಾದರೂ ಕಲ್ಪಿಸಿ ಕೊಟ್ಟಲ್ಲಿ, ಕಾಲಗರ್ಭದಲ್ಲೇ ಹುದುಗಿ ಹೋಗಬಹುದಾದ ಮೈಸೂರಿನ ವಾಗ್ಗೇಯ ಕಾರರ ಅನರ್ಘ್ಯ, ಅಮೂಲ್ಯ ಕೃತಿ ರತ್ನಗಳನ್ನು ಕೇಳುವ, ಕಲಿಯುವ ಸುಯೋಗ ನಮ್ಮಂತಹ ಸಂಗೀತ ವಿದ್ಯಾರ್ಥಿಗಳಿಗೆ ಸಂಗೀತ ರಸಿಕರಿಗೆ ದೊರೆಯಬಹುದು.

- ನಳಿನಿ ರಾವ್
(ದೇನಾಬ್ಯಾಂಕ್, ನೇಪಿಯನ್ ಸೀರೋಡ್, ಮುಂಬಯಿ)

# ತಿಂಗಳ ನಾಟಕ - ಗೋಡೇ ಬೇಕೇ ಗೋಡೆ

ಕಳೆದ ತಿಂಗಳ ತಾ. ೨೪ರಂದು ನಾಟಕ ವಾಚನ ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಮಂಜುನಾಥ್ ಮತ್ತು ಕೆ. ಮಂಜುನಾಥಯ್ಯ ಇವರಿಬ್ಬರೂ ಮೈಸೂರು ಅಸೋಸಿಯೇಶನ್ ಕಲಾ ವಿಭಾಗದ ಪರವಾಗಿ ನ. ರತ್ನ ಅವರು ಬರೆದ ಅಸಂಗತ ನಾಟಕ "ಗೋಡೆ ಬೇಕೇ ಗೋಡೆ" ಎಂಬ ಕಿರು ನಾಟಕವನ್ನು ಪ್ರಸ್ತುತ ಪಡಿಸಿದರು. ಹೆಸರೇ ಹೇಳುವಂತೆ ಇದೊಂದು ಅಸಂಗತ ನಾಟಕ ಇಬ್ಬರು ವ್ಯಕ್ತಿಗಳು ಒಂದು ಪಾರದರ್ಶಕ ಗಾಜಿನ ಗೋಡೆಯನ್ನು ಮಾರಲು ಪ್ರಯತ್ನಿಸುವ ಪ್ರಸಂಗ. ಯಾರೋ ಬಿಟ್ಟು ಹೋಗಿದ್ದ ಗೋಡೆಯನ್ನು ಒಬ್ಬ ವ್ಯಕ್ತಿ, ಇನ್ನೊಬ್ಬನ ಸಹಾಯದಿಂದ ಬೀದಿಯಲ್ಲಿ ಮಾರಬೇಕೆಂದು ಬಂದಿರುತ್ತಾನೆ. ಇಬ್ಬರೂ ಈ ಜಗತ್ತಿನಲ್ಲಿ ಒಬ್ಬಂಟಿಗರಾಗಿರುತ್ತಾರೆ. ಈ ಗೋಡೆ ಮಾರುವ ನೆಪದಿಂದ ಜೊತೆಯಾಗುತ್ತಾರೆ. ಆದರೆ ಮೊದಲಿನವ ಮಾರಲು ಅಷ್ಟು ಉತ್ಸುಕನಾಗಿರುವುದಿಲ್ಲ. ಇನ್ನೊಬ್ಬನಿಗೆ ಮಾತ್ರ ತನ್ನ ಹೆಗಲ ಮೇಲಿನ ಭಾರವನ್ನು ಇಳಿಸಿಕೊಳ್ಳುವುದಷ್ಟೇ ಅಲ್ಲದೆ ತನ್ನ ಕಿಸೆಗೆ ನಾಲ್ಕು ಕಾಸು ಬರಲಿ ಅನ್ನುವ ಆಸೆ ಇರುತ್ತದೆ. ಇಲ್ಲಿ ಗೋಡೆ ನಿಮಿತ್ತ ಮಾತ್ರ; ಒಂದು ಸಾಂಕೇತಿಕ. ನಾಟಕ ಹಾಸ್ಯಮಯವಾಗಿ ಸಾಗಿದರೂ ಬಹಳಷ್ಟು ಗೂಢಾರ್ಥಗಳನ್ನೊಳಗೊಂಡಿದ್ದು ಕೇಳುಗರನ್ನು ಯೋಚನೆ ಮಾಡಲು ಪ್ರೇರೇಪಿಸುತ್ತದೆ.

ಮುಖ್ಯವಾಗಿ ಮನುಷ್ಯನಿಗೆ ಗೋಡೆ ಯಾಕೆ ಬೇಕು? ಮತ್ತು ಬೇಕಿದ್ದರೆ ಎಂಥ ಗೋಡೆ ಬೇಕು? ಕೇವಲ ರಕ್ಷಣೆಗಾಗಿ ಮಾತ್ರವೇ? ಇಲ್ಲ ಏನನ್ನಾದರೂ ಬಚ್ಚಿಡುವುದಿದೆಯೇ? ಹಾಗಿಲ್ಲದಿದ್ದರೆ ಪಾರದರ್ಶಕ ಏಕೆಬೇಕು? ಇದು ಸ್ವಂತ ಗೋಡೆಯೇ? ಇಷ್ಟವೇ ಅಥವಾ ಇನ್ನೊಬ್ಬರು ನಮ್ಮ ಮೇಲೆ ಬಲವಂತವಾಗಿ ಹೇರಿದಂಥ ಒತ್ತಡವೇ? ಅನವಶ್ಯಕವಾದರೂ ಮನಸ್ಸಿನ ಒಂದು ಮೂಲೆಯಲ್ಲಿ ಇರಬಾರದೇಕೆ ? ಎಂಬ ಆಸೆ ಹೊತ್ತು ತನ್ನಲ್ಲಿ ಅದಕ್ಕೆ ಬೇಕಾದ ದ್ರವ್ಯವಿಲ್ಲದಿದ್ದರೂ ಕೊಂಡಿಟ್ಟುಕೊಳ್ಳುವ ಪ್ರಯತ್ನವೇ? ಈ ಗೋಡೆ ಎಂಬುದು ಏನು? ನಮ್ಮ ಮನಸ್ಸಿನ ಆಗುಹೋಗುಗಳೇ? ನಮ್ಮ ನಡವಳಿಕೆಯೇ? ಆಚಾರ ವಿಚಾರಗಳೇ? ಧರ್ಮವೇ ಸಂಸ್ಕೃತಿಯೇ? ಇದು ಏನು? ಹೀಗೆ ಅನೇಕ ಪ್ರಶ್ನೆಗಳು ಪದರ ಪದರವಾಗಿ ಬಿಡಿಸಿಕೊಳ್ಳುತ್ತಾ ಹೋಗುತ್ತವೆ.

ಮನುಷ್ಯ ಒಂದು ಸಂಘ ಜೀವಿ, ಒಂಟಿಯಾಗಿ ಪ್ರಾಣಿಗಳಂತೆ ಕಾಡಿನಲ್ಲಿ ಬಾಳಲಾರ ಅನ್ನುವುದೊಂದು ಗ್ರೀಕ ತತ್ವಜ್ಞಾನಿಯೊಬ್ಬರ ಸಿದ್ಧಾಂತ. ಆದರೆ ನಮ್ಮ ಭಾರತೀಯ ತತ್ವಜ್ಞಾನ ಹೇಳುವುದು ಮನುಷ್ಯ ಒಂಟಿ. ಹುಟ್ಟುವಾಗ, ಸಾಯುವಾಗ, ಗುಂಪಿನಲ್ಲಿದ್ದಾಗ ಒಂಟಿಯಾಗಿದ್ದಾಗ ಯಾವಾಗಲೂ ಅವನು ಒಂಟಿಯೇ. ಎರಡೂ ಒಂದು ರೀತಿಯಲ್ಲಿ ನಿಜ. ಮನುಷ್ಯ ಗುಂಪಿನಲ್ಲಿರುವಾಗ ಒಂಟಿಯಾಗಿರಬಯಸುತ್ತಾನೆ. ಆದರೆ ಅದೇ ಒಂಟಿಯಾಗಿದ್ದಾಗ ಗುಂಪನ್ನು ಬಯಸುತ್ತಾನೆ. ಈ ಎರಡೂ ತತ್ವಜ್ಞಾನಗಳ ತಾಕಲಾಟವನ್ನೂ ಈ ನಾಟಕದಲ್ಲಿ ಕಾಣಬಹುದಾಗಿದೆ.

ಅಸಂಗತ ಹಾಗೂ ಸಾಂಕೇತಿಕವಾದ ಈ ನಾಟಕವನ್ನು ರಂಗ ಮಂಚದ ಮೇಲೆ ಆಡಿಸುವ ಸಾಧ್ಯತೆ ಬಾಧ್ಯತೆಗಳೇನು ಎನ್ನು ಚರ್ಚೆಯೊಂದಿಗೆ ಕಾರ್ಯಕ್ರಮ ಮುಕ್ತಾಯ ವಾಯಿತು.

ಸಂದರ್ಶನ :

# ಡಾ। ಸುಕನ್ಯಾ ಪ್ರಭಾಕರ್

✍ ಶ್ಯಾಮಲಾ ರಾಧೇಶ್

ನೇ. : ನಿಮ್ಮ ಸಂಗೀತಾಭ್ಯಾಸದ ಕಿರು ಪರಿಚಯ ಮಾಡಿಸಿ.

ಸು. : ನಾನು ಸಂಗೀತ ವಾತಾವರಣವಿರುವ ಮನೆಯಲ್ಲೇ ಹುಟ್ಟಿದವಳು. ನನ್ನ ತಾಯಿ 'ಲಕ್ಷ್ಮಮ್ಮ ಸುಬ್ಬರಾವ್' ಅವರೇ ನನ್ನ ಮೊದಲ ಗುರುಗಳು. ನಾನು ಪದವಿಯಲ್ಲಿಯೂ ಕೂಡಾ ಸಂಗೀತವನ್ನೇ ಆರಿಸಿಕೊಂಡು B. Music ಮಾಡಿದೆ. ನಂತರ M. Music ಕೂಡಾ ಮಾಡಿದೆ. 1975ರಲ್ಲಿ ಮದುವೆ ನಂತರ ಸಂಗೀತಕ್ಕೆ ಪೂರ್ಣ ವಿರಾಮ ಹಾಕಿಬಿಟ್ಟೆ...

ನೇ. : ಈ ವಿರಾಮದ ನಂತರ ಪುನಃ ಸಂಗೀತ ಕ್ಷೇತ್ರಕ್ಕೆ ಬಂದ ಹಿನ್ನೆಲೆ ತಿಳಿಸುವಿರಾ?

ಸು. : 1983ರಲ್ಲಿ ಶ್ರೀ ರಾಮರತ್ನಂ (ನಾನು M. Music ಮಾಡುವಾಗ Principalನ ಆಗಿದ್ದವರು) ಅವರು ನನ್ನನ್ನು ಕರೆದು ಆ ವರ್ಷದ ಗಾಯನ ಸಮಾಜದ ಸಂಗೀತೋತ್ಸವದಲ್ಲಿ ಅರ್ಧ ಘಂಟೆಯ ಪ್ರಾರ್ಥನೆ ಹಾಡುವಂತೆ ಆಜ್ಞಾಪಿಸಿದರು. ಅದರಲ್ಲೂ ಒಬ್ಬರೇ ವಾಗ್ಗೇಯಕಾರರ 4-5 ಕೃತಿಗಳನ್ನು ಹಾಡಬೇಕೆಂದೂ ಅದೂ ಮಹಾರಾಜ ಜಯಚಾಮರಾಜೇಂದ್ರ ಒಡೆಯರ ಕೃತಿಗಳನ್ನೇ ಹಾಡು ಎಂದು ಪ್ರೇರೇಪಿಸಿ ಕಲಿಸಿಕೊಟ್ಟರು. ಅಲ್ಲಿಂದಲೇ ಬಹುಶಃ ನನ್ನ ಮತ್ತು ಮಹಾರಾಜರ ಕೃತಿಗಳ ಸಂಬಂಧ ಪ್ರಾರಂಭಿಸಿತೋ ಅನ್ನಿಸುತ್ತದೆ....

ನೇ. : ನಂತರ ಈ ಸಂಗೀತವನ್ನು ಬೆಳೆಸಿಕೊಂಡ ಬಗೆ ಹೇಗೆ?

ಸು. : ನಾನು M. Music ಮಾಡುವಾಗ ಶ್ರೀಮತಿ ಗೌರೀ ಕುಪ್ಪಸ್ವಾಮಿಯವರಲ್ಲಿ ಕಲಿತಿದ್ದೆ. ನಂತರ ಶ್ರೀರಾಮರತ್ನಂ ಅವರಲ್ಲಿ ಸ್ವಲ್ಪ ಕಲಿತೆ. ನಂತರ ಶ್ರೀಮತಿ ನಾಗರತ್ನ ಸದಾಶಿವ ಎಂಬುವರಲ್ಲಿ ಬಹಳ ಕಾಲ ಕಲಿತೆ. ಹೀಗೆ 83-900 ವರೆಗೆ ಕಲಿಕೆ ಮತ್ತು ಅಭ್ಯಾಸಗಳ ನಡುವೆ ನಡೆಯುತ್ತಿದ್ದ ಸಂಗೀತ ನಂತರ ಸತತ ಪರಿಶ್ರಮದಿಂದ ನಡೆಯಿತು. ನಿರಂತರ ಅಭ್ಯಾಸವೇ ಈ ಒಂದು ಮಟ್ಟಕ್ಕೇ ಕಾರಣ ಎಂದು ಮಾತ್ರ ಹೇಳಬಲ್ಲೆ.

ನೇ. : ನಿಮ್ಮ P.hd. ಮಹಾಪ್ರಬಂಧ ''ಶ್ರೀ ಜಯಚಾಮರಾಜ ಒಡೆಯರ್'' ಅದರ ಹುಟ್ಟು ಹೇಗಾಯಿತು? ತಿಳಿಸಿ.

ಸು. : ಹೇಗೆ ಎಲ್ಲಿಂದ... ಯಾವಾಗ... ಎಂದು ಖಚಿತವಾಗಿ ತಿಳಿಸಲು ಪ್ರಾಯಶಃ ಸಾಧ್ಯವಾಗುವುದಿಲ್ಲವೇನೋ... ನಾನು ಕಾಲೇಜಿನಲ್ಲಿ ಓದುವಾಗ ಗೆಳತಿಯರೆಲ್ಲರ ಪ್ರೋತ್ಸಾಹ ಮನಸ್ಸಿನಲ್ಲಿ ಆಸೆಯ ಬೀಜವನ್ನು ಬಿತ್ತಿತ್ತು. Guru Prof. R. ವಿಶ್ವೇಶ್ವರನ್ ಸಂಗೀತದ ಪ್ರಾಂಶುಪಾಲರು, ಅವರ ಉತ್ತೇಜನ, ಏನಾದ್ರೂ ಮಾಡಬೇಕು ಎನ್ನುವ ಉದ್ದೇಶ, ಆದರೆ, ದಿಕ್ಕು ಮಾತ್ರ ತಿಳಿದಿರಲಿಲ್ಲ. 1985-86ರಲ್ಲಿ ರಾಷ್ಟ್ರಕವಿ ಕುವೆಂಪು ಅವರು ನನ್ನನ್ನು ಕರೆಸಿ ಹಾಡಿಸಿದರು. ಹಾಡು ಮುಗಿದ ನಂತರ ಭಾವುಕರಾಗಿದ್ದ ಅವರು ನನ್ನನ್ನು ಹೀಗೆ ಕೇಳಿದರು. ''ನೀನು ನಿನ್ನ ನೆಲಕ್ಕಾಗಿ ಏನಾದರೂ ಮಾಡಬೇಕು ಎನ್ನುವ ಮನಸ್ಸು ಇಲ್ಲವಾ...? ''ಮೌನ.... ಒಂದೇ ಉತ್ತರವಾಯಿತು. ಮಾತು ಒಳಕ್ಕಾಯಿತು. ನನ್ನಿಂದ ಮಾತೇನು ಹೊರಡಲಿಲ್ಲ. ಮತ್ತೆ 1993ರಲ್ಲಿ ಗುರು ಬಿ.ಎಸ್. ವಿಜಯರಾಘವನ್ (Principal of Fine Arts College) ಅವರು ನಾನು ಗೈಡ್ ಆಗುತ್ತೇನೆ ನೀನು P.hd. ಮಾಡು ಎಂದು ಪ್ರೋತ್ಸಾಹಿಸಿದರು. ನನ್ನ ಶಿಷ್ಯೆ ತುಳಸಿ ರಾಮಚಂದ್ರ (ನೃತ್ಯಗಾರ್ತಿ) ಅವರು ಸಂಗ್ರಹಿಸಿ ಕೊಟ್ಟ Information. ಈ ಎಲ್ಲಾ ಆಸೆ. ನಿರಾಸೆಗಳ ಮಧ್ಯೆ 1995ರಲ್ಲಿ P.hd ಮಾಡಲು ಮೈಸೂರು ವಿಶ್ವವಿದ್ಯಾನಿಲಯದಿಂದ ಒಪ್ಪಿಗೆ ಸಿಕ್ಕಿತು.

ನೇ. : ಒಡೆಯರ ಕೃತಿಗಳು ಪ್ರಚಲಿತವಲ್ಲವಾದ್ದರಿಂದ, ನೀವು ಹೇಗೆ ಇಷ್ಟೊಂದು ಕೃತಿಗಳನ್ನು ಸಂಗ್ರಹಿಸಿದಿರಿ?

ಸು. : ನಾನು ಈ ಮಹಾ ಪ್ರಬಂಧ ಬರೆಯಲು ಪ್ರಾರಂಭಿಸಿದಾಗ ನನ್ನ ಕೈಯಲ್ಲಿದ್ದುದ್ದು ನಾಲ್ಕೇ ಕೃತಿಗಳು (ಈಗ ನೆನೆಸಿಕೊಂಡರು ಭಯವಾಗುತ್ತೆ) ನನ್ನ ಶಿಷ್ಯೆ ಗೌರೀ ರಾಯಚೂರಿನಿಂದ 8 ಕೃತಿಗಳನ್ನು ಸಂಗ್ರಹಿಸಿ ಕಳುಹಿಸಿದ್ದೇ ನನ್ನ ಮೊದಲ ಹೆಜ್ಜೆ. ನಂತರ ಮದನವೀರರಾಜೇ ಅರಸ ಅವರ ''ಜಯಸಂವರ್ಧನ ಸಮಿತಿ''ಯಿಂದ ಕೆಲವು ಕೃತಿಗಳ ಸಂಗ್ರಹ ನನ್ನ ಗುರುಗಳು, ಹಲವಾರು. ವಿದ್ವಾಂಸರುಗಳು ಈ ಕಾರ್ಯದಲ್ಲಿ ನನಗೆ ಸಹಾಯ ಮಾಡಿದ್ದಾರೆ. ಮೈಸೂರು ವಾಸುದೇವಾಚಾರ್ಯರ ಮೊಮ್ಮಗ ಎಸ್. ಕೃಷ್ಣಮೂರ್ತಿರಾಯರು, ಹೀಗೆ ಹಲವಾರು ಕೈಗಳು ಪ್ರತ್ಯಕ್ಷ ಮತ್ತು ಪರೋಕ್ಷಾಗಿ ಸಹಾಯ ನೀಡಿವೆ.

ನೇ. : ಜಯಚಾಮರಾಜೇಂದ್ರ ಒಡೆಯರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

ಸು. : ಅವರ ಬಗ್ಗೆ ಮಾತಾಡಲು ಕುಳಿತರೆ ದಿವಸಗಳೇ ಬೇಕಾಗುತ್ತದೆ ಎನಿಸುತ್ತದೆ. ಅವರ ಗುರುಗಳಾಗಿದ್ದ Prof. S. ರಾಮಚಂದ್ರರಾಯರು ಸ್ವತಃ ಮತ್ತು ಅವರ ಒಡನಾಡಿಗಳಾಗಿದ್ದ ಎಸ್. ಕೃಷ್ಣಮೂರ್ತಿರಾಯರು ಕೂಡಾ ಎಲ್ಲಾ ವಿಷಯಗಳನ್ನು ವಿವರವಾಗಿ ತಿಳಿಸಿದ್ದಾರೆ.

ಅವರಿಗೆ ಇದ್ದ ಅಪಾರ ಜ್ಞಾನ (ಸಂಗೀತ, ಸಾಹಿತ್ಯ, ಸಂಸ್ಕೃತ) ಅವರ ಕೃತಿಗಳ ಮತ್ತು ಗ್ರಂಥಗಳ ಮೂಲಕ ಹೊರಹೊಮ್ಮಿದೆ. ಆಧ್ಯಾತ್ಮಿಕ ಚಿಂತನೆ ಅವರ ಕೃತಿಗಳಲ್ಲಿ ಎದ್ದು ಕಾಣುವ ಮುಖ್ಯ ಅಂಶ. ಕೃತಿಗಳಲ್ಲಿನ ಗಂಭೀರವಾದ ಸಾಹಿತ್ಯ ಆ ವ್ಯಕ್ತಿಯ ಪರಿಚಯ ಮತ್ತು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶ್ರೀ ಸೂಕ್ತ, ಶ್ರೀ ಚಕ್ರ ಇವುಗಳಲ್ಲಿ ಅವರಿಗಿದ್ದ ಆಳವಾದ ಜ್ಞಾನ, ವಿಶೇಷ ಒಲವು ತಿಳಿಯುತ್ತದೆ. ಅವರು ಒಳ್ಳೆಯ ತತ್ವಜ್ಞಾನಿ ಕೂಡಾ. ಅವರು ಒಳ್ಳೆ ಪಿಯಾನೋ ವಾದಕರಾಗಿದ್ದು, ಪಾಶ್ಚಿಮಾತ್ಯ ಸಂಗೀತದಲ್ಲಿ ಅಪಾರವಾದ ತಿಳಿವಿತ್ತು. ಆದ್ದರಿಂದಲೇ ಅವರ ಎಲ್ಲಾ ಕೃತಿ ರಚನೆ ಕೂಡಾ ಪಾಶ್ಚಿಮಾತ್ಯ ಲಿಪಿಯಲ್ಲೇ ಇರುತಿತ್ತು. ಅವರ ಆಸ್ಥಾನ ವಿದ್ವಾಂಸರಾಗಿದ್ದ ಶ್ರೀ ಚೆನ್ನಕೇಶವಯ್ಯನವರು ಅವನ್ನೆಲ್ಲಾ ಕನ್ನಡಕ್ಕೆ ಅನುವಾದಿಸಿದರು.

ನೇ. : ನಿಮ್ಮ ಈ ಎಲ್ಲಾ ಕೆಲಸಗಳಲ್ಲಿ ನಿಮ್ಮ ಮನೆಯವರು ಹೇಗೆ ಪ್ರೋತ್ಸಾಹಿಸಿದರು ತಿಳಿಸಿ.

ಸು. : 1975ರಲ್ಲಿ ನನ್ನ ಮದುವೆ 76ರಲ್ಲಿ Air Selection ನಂತರ ಸಂಗೀತ ಕ್ಷೇತ್ರಕ್ಕೆ ನಾನು ಕಾಲಿರಿಸಿದ ದಿನದಿಂದ ಪ್ರತೀ ಹೆಜ್ಜೆ ಹೆಜ್ಜೆಯಲ್ಲಿದ್ದು ಅವರು ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಅವರ ಒತ್ತಾಯ ಪೂರ್ವಕ ಉತ್ತೇಜನದಿಂದಲೇ ಈ ಮಹಾ ಪ್ರಬಂಧವಾಗಲು ಸಾಧ್ಯವಾದುದು. Application form ತರುವುದರಿಂದ ಹಿಡಿದು ಎಲ್ಲಾ ವಿಷಯಗಳಲ್ಲೂ ನನಗೆ ಬೆಂಬಲವನ್ನು ನೀಡಿದ್ದಾರೆ. ಅವರ ಅಕ್ಕ ಜಯಲಕ್ಷ್ಮಿ ಅವರ ಪ್ರೋತ್ಸಾಹವಂತೂ ವಿಶೇಷವಾದುದು. ದೇವರು ''ನನ್ನ ಯೋಗ್ಯತೆಯನ್ನು


TRIMURTI

JEWELLERS

GOLD AND DIAMOND ORNAMENTS

460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.

Phone : **2402 3485**

ಮೀರಿ ಪ್ರಸಾದವನ್ನು ಕರುಣಿಸಿದ್ದಾನೆ''. ನಾನು ಕೊಟ್ಟು ಹುಟ್ಟಿದ್ದೇನೆ.

(ಮೌನ. ಅವರ ಮನಸ್ಸು, ಹೃದಯ, ಕಣ್ಣು ತುಂಬಿ ಬಂದಿತ್ತು)

ನೇ. : ದೀಕ್ಷಿತರು, ಶಾಮಾಶಾಸ್ತ್ರಿಗಳು ಮತ್ತು ತ್ಯಾಗರಾಜರ ಪ್ರಭಾವ ಒಡೆಯರ ಮೇಲೆ ಆಗಿದೆಯೇ?

ಸು. : ಆಗಿದೆ. ಎನ್ನಬಹುದು. ಭಾಷಾ ಮತ್ತು ರಚನಾ ಶೈಲಿ, ಹೊಸ ರಾಗಗಳ ಆವಿಷ್ಕಾರ, ಬಳಕೆಯಲ್ಲಿಲ್ಲದ ರಾಗಗಳಲ್ಲಿ ಕೃತಿ ರಚನೆ ಇವುಗಳು ದೀಕ್ಷಿತರ ಪ್ರಭಾವವನ್ನು ಸೂಚಿಸುತ್ತದೆ. ತಾಳದ ಮೇಲಿನ ಬಿಗಿತ, ತಾಳದ ಸೂಕ್ಷ್ಮತೆ, ತಾಳದಲ್ಲಿ ಗ್ರಹಗಳ ಬಳಕೆ (ಸಮ, ವಿಷಮ), ಪ್ರಭೇಧಗಳ ಪ್ರಯೋಗ (ಅತೀತ, ಅನಾಗತ), ಶಾಮಾ ಶಾಸ್ತ್ರಿಗಳ ಆಕರ್ಷಣೆಗೆ ಸಿಲುಕಿರುವಂತೆ ತೋರುತ್ತದೆ. ಭಕ್ತನ ಅಳಲು, ಅಂತರಂಗದ ಮೊರೆ (ಬಹುಶಃ ಭಾವ) ಅನುಪಲ್ಲವಿಯ ನಂತರ ಅನೇಕ ಚರಣಗಳ ಬಳಕೆ ಇವೆಲ್ಲಾ ತ್ಯಾಗರಾಜರ ಪ್ರಭಾವವನ್ನು ಸಾರುತ್ತದೆ. ಕೆಲವೊಮ್ಮೆ ಸಾಹಿತ್ಯದ ಸರಳತೆ ಗಮನಿಸಿದರೆ ವಾಸುದೇವಾಚಾರ್ಯರ ಪ್ರಭಾವವೋ ಎನಿಸುತ್ತದೆ.

ನೇ. : ಪ್ರಸ್ತುತ ನೀವು ಯಾವ ಕಾರ್ಯದಲ್ಲಿ ತೊಡಗಿದ್ದೀರಾ ? ಮುಂದೆ ಯಾವ ಯೋಜನೆ ಇಟ್ಟುಕೊಂಡಿದ್ದೀರಾ?

ಸು. : ನನಗೆ ಈಗ ಸೀನಿಯರ್ ಫೆಲೋಷಿಪ್ ಸಿಕ್ಕಿದೆ. ಅದಕ್ಕಾಗಿ ''Rare Instruments in Mysore Palace'' ಎಂಬ ಗ್ರಂಥ ಬರೆಯುತ್ತಿದ್ದೇನೆ. ಅದು ಮುಗಿದ ನಂತರ, ಸುಮಾರು ನನ್ನ 70 ಲೇಖನಗಳು, ವಿಮರ್ಶೆಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅವೆಲ್ಲವನ್ನೂ ಒಟ್ಟಾಗಿ ಸೇರಿಸಿ ಒಂದು ಪುಸ್ತಕ ಮಾಡುವ ಆಸೆ ಇದೆ.

ನೇ. : ನಿಮ್ಮ ದೃಷ್ಟಿಕೋನದಲ್ಲಿ ಅಧ್ಯಯನ ಶಿಬಿರದ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ?

ಸು. : ಖಂಡಿತವಾಗಿಯೂ ಇದೆ. ಇಂತಹ ಒಂದು ಆತುರ ಮತ್ತು ವೇಗದ ಜನ ಜೀವನಕ್ಕೆ ಅಧ್ಯಯನ ಶಿಬಿರದ ಅವಶ್ಯಕತೆ ಬಹಳವಾಗಿ ಇದೆ. ಶಿಬಿರಗಳಲ್ಲಿ ಹೊಸ ಹೊಸ ರಾಗಗಳನ್ನು ಬಹಳ ಸುಲಭವಾಗಿ ಕಲಿಯಲು ಸಾಧ್ಯ. ಪ್ರತೀ ಶಿಬಿರದಲ್ಲೂ ''ನೂತನಕೆ ನೂತನ ಬಲು ನೂತನ'' ಎಂಬಂತೆ ದಿನವೂ ಹೊಸ ಹೊಸ ಅನುಭವಗಳಾಗುತ್ತದೆ. ನಾನು ''ಕಲಿಸುವುದಕ್ಕಿಂತ ಕಲಿತಿರುವುದೇ ಜಾಸ್ತಿ'' ಎಂದು ಅನಿಸುತ್ತದೆ.

ನೇ. : ನೀವು ಮುಂದೆ ಸಂಗೀತಕ್ಕಾಗಿ ಯಾವ ಒಂದು ಮಹತ್ತರ ಧ್ಯೇಯ ಇಟ್ಟುಕೊಂಡಿದ್ದೀರಾ?

ಸು. : ನನ್ನ ಈ ಉದ್ದೇಶ ಅಥವಾ ಆಸೆ ನೆರವೇರುತ್ತದೆಯೋ ಇಲ್ಲವೋ ತಿಳಿಯದು ಆದರೂ ಆಸೆಯಂತೂ ಇದೆ. ಶಾಲೆಗಳಿಗೆ ಹೋಗಿ ಅಲ್ಲಿಯ ಚಿಗುರುಗಳಿಗೆ (ಚಿಕ್ಕ ಮಕ್ಕಳಿಗೆ) ಕಲಿಸುವ ಆಸೆ. ಪ್ರಧಾನವಾಗಿ ಸಂಗೀತವೇ (ಸ..ರಿ..ಗ...ಮ..) ಅಲ್ಲದಿದ್ದರೂ ಚಿಕ್ಕ ಚಿಕ್ಕ ಭಜನೆಗಳು. ನೀತಿ ಪೂರ್ಣ ಹಾಡುಗಳನ್ನು ಕಲಿಸುವುದು. ಒಂದೇ ಜಾಗದಲ್ಲಿ ಒಟ್ಟಿಗೆ ಹಲವಾರು ಮಕ್ಕಳಿಗೆ ಹಲವಾರು ಕಾರಣಗಳಿಂದ ಕಲಿಯಲವಕಾಶವಾಗಿರುವುದಿಲ್ಲ. ಈ ಒಂದು ರೀತಿಯಿಂದ ಅಂತಹ ಮಕ್ಕಳನ್ನು ಗುರುತಿಸಿ ಮುಂದಕ್ಕೆ ತರಲು ಪ್ರಯತ್ನಿಸಬಹುದು.

ನೇ. : ಧನ್ಯವಾದಗಳು.

ಮೈಸೂರು ಅಸೋಸಿಯೇಶನ್‌ನಲ್ಲಿ ನವೆಂಬರ್ ತಿಂಗಳಲ್ಲಿ ಶ್ರೀ ಜಯಚಾಮರಾಜೇಂದ್ರ ಕೃತಿಗಳ ಅಧ್ಯಯನ ಶಿಬಿರ ನಡೆಯಿತು. ಶಿಬಿರವನ್ನು ನಡೆಸಿಕೊಟ್ಟ ಗುರು ವಿದೂಷಿ ಶ್ರೀಮತಿ ಡಾ. ಸುಕನ್ಯಾ ಪ್ರಭಾಕರ ಅವರೊಂದಿಗಿನ ಸಂದರ್ಶನ

ಶ್ರೀಮತಿ ಸುಕನ್ಯಾ ಅವರು ಬಹುಮುಖಿ ಪ್ರತಿಭೆಯ ಸಂಗೀತಗಾರ್ತಿ. ಅವರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ ಅವರ ಕೃತಿಗಳ ಮೇಲೆ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪಡೆದಿದ್ದಾರೆ. ಶಿಷ್ಯ ವೃಂದಕ್ಕೆ ತರಬೇತಿ ಅವರ ಮೈಸೂರಿನ ಸ್ವಗೃಹ 'ಸುರಭಿ'ಯಲ್ಲಿ ಅವರ ಸೇವೆ ಸಂಗೀತಕ್ಕಾಗಿ ಹಲವಾರು ರೀತಿಯಲ್ಲಿ ನಡೆಯುತ್ತಿದೆ. •

ಮೂಡುಬಿದಿರೆಯಲ್ಲಿ ನಡೆಯುವ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮೂಡಿಬಂದ ನೆನಪು.

## ಮೂಡುಬಿದಿರೆಗೂ ಭಾರತೀಯ ಜ್ಞಾನ ಪೀಠಕ್ಕೂ ನಂಟು
## ಭಾರತೀಯ ಜ್ಞಾನ ಪೀಠಕ್ಕೆ ಕನ್ನಡವೇ ಸ್ಫೂರ್ತಿ

ಇದೇ ಡಿಸೆಂಬರ್ 18ರಿಂದ 21ರ ವರೆಗೆ ಮೂಡುಬಿದಿರೆಯಲ್ಲಿ 71ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಡೆಯುವುದು ಸರಿಯಷ್ಟೇ. ಮೂಡುಬಿದಿರೆಗೂ ಭಾರತೀಯ ಜ್ಞಾನಪೀಠಕ್ಕೂ ಇರುವ ನಂಟನ್ನು ಮುಂಬಾಯಿಯಲ್ಲಿ ದಿನಾಂಕ 27-9-92ರಂದು ನಡೆದ ಸಮಾರಂಭವೊಂದರಲ್ಲಿ ಉಲ್ಲೇಖವಾಗಿತ್ತು.

ಮುಂಬಯಿಯ ಡೊಂಬಿವಲಿಯಲ್ಲಿರುವ **ಮೈಸೂರು ಸಂಗೀತ ವಿದ್ಯಾಲಯದವರು ದಿನಾಂಕ 27-9-92ರಂದು** 'ಕನ್ನಡ ಜ್ಞಾನ ಯಜ್ಞ' ಎಂಬ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಿದರು. ಭಾರತೀಯ ಜ್ಞಾನ ಪೀಠ ಪ್ರಶಸ್ತಿ ಪಡೆದ ಐದು ಮಂದಿ ಮಹಾನ್ ವ್ಯಕ್ತಿಗಳ (ಆಗ ಐದು ಮಂದಿ ಕನ್ನಡಿಗರಿಗೆ ಮಾತ್ರ ಪ್ರಶಸ್ತಿ ಲಭಿಸಿತ್ತು) ಕೃತಿಗಳ ವಿಶ್ಲೇಷಣೆ ನಡೆಯಿತು. 'ಕನ್ನಡ ಜ್ಞಾನ ಯಜ್ಞ'ದ ಉತ್ಸವದ ಉದ್ಘಾಟನೆಯನ್ನು ಭಾರತೀಯ ಜ್ಞಾನಪೀಠದ ಮಹಾ ನಿರ್ದೇಶಕರಾದ ಡಾ.ಪಿ. ಪಾಂಡುರಂಗರಾವ್ ಮಾಡಿದರು. ಡಾ. ಹಂಪನಾರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿಗಳ ವಿಶ್ಲೇಷಣೆಯನ್ನು ಡಾ. ವಸಂತ ಕುಮಾರ್ ಪೆರ್ಲ (?) (ಕುವೆಂಪುರವರ ರಾಮಾಯಣ ದರ್ಶನಂ), ಡಾ. ವೀರಣ್ಣ (ದ.ರಾ. ಬೇಂದ್ರೆಯವರ ನಾಕು ತಂತಿ), ಪ್ರಾ. ಸೀತಾರಾಮ ಶೆಟ್ಟಿ (ಡಾ. ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು), ಡಾ. ಸುನೀತಾ ಶೆಟ್ಟಿ (ಮಾಸ್ತಿಯವರ ಚಿಕ್ಕವೀರ ರಾಜೇಂದ್ರ), ಡಾ. ಜಿ.ವಿ. ಕುಲಕರ್ಣಿ (ಡಾ. ಗೋಕಾಕರ ಭಾರತ ಸಿಂಧೂ ರಶ್ಮಿ) ಯವರುಗಳು ಮಾಡಿದರು. ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಸಂಗೀತ ವಿದುಷಿ ಉಮಾನಾಗಭೂಷಣ್ ನಿರ್ದೇಶನದಲ್ಲಿ ಕವಿವರ್ಯರ ಕವನಗಳ ಗಾಯನವನ್ನು ಮಾಡಿದರು.

ಅಂದು ನಡೆದ ಸಮಾರಂಭದಲ್ಲಿ ತಿಳಿದು ಬಂದ ಮಹತ್ವದ ವಿಷಯವೆಂದರೆ ''ಭಾರತೀಯ ಜ್ಞಾನಪೀಠಕ್ಕೆ ಮೂಡುಬಿದಿರೆಯೇ ಸ್ಫೂರ್ತಿ'' ಇದು ಅಂದು ಉತ್ಸವವನ್ನು ಉದ್ಘಾಟಿಸಿದ ಭಾರತೀಯ ಜ್ಞಾನಪೀಠದ ಮಹಾನಿರ್ದೇಶಕ ಡಾ. ಪಿ. ಪಾಂಡುರಂಗರಾವ್ ಅವರ ಉದ್ಘಾಟನಾ ಭಾಷಣದಿಂದ ತಿಳಿದು ಬರುತ್ತದೆ.

### ಉದ್ಘಾಟನಾ ಭಾಷಣದ ಸಾರಾಂಶ

ಕನ್ನಡ ಭಾಷೆಗೂ ಹಾಗೂ ಕರ್ನಾಟಕಕ್ಕೂ 1944ರಲ್ಲಿ ಸ್ಥಾಪನೆಯಾದ ಭಾರತೀಯ ಜ್ಞಾನಪೀಠಕ್ಕೂ ಹತ್ತಿರದ ನಂಟು ಬೆಳೆದು ಬಂದಿದೆ. ಈ ಸಂದರ್ಭದಲ್ಲಿ ಭಾರತೀಯ ಜ್ಞಾನಪೀಠ ಸ್ಥಾಪನೆಗೆ ಸ್ಫೂರ್ತಿ ನೀಡಿದ ವಿಷಯವನ್ನು ಸ್ಮರಿಸುವುದು ಸೂಕ್ತ. ಈ ಸ್ಫೂರ್ತಿ ಕರ್ನಾಟಕದ ಸ್ಥಳವಾದ ಈ 'ಮೂಡಬಿದರೆ'ಯಲ್ಲಿ ದೊರೆತ ಕೈ ಬರಹದ 'ಮಹಾಬಂಧ' ಎಂಬ ಗ್ರಂಥ'ವೊಂದರಿಂದ ಪ್ರಾರಂಭವಾಯಿತು. ಈ ಗ್ರಂಥವನ್ನು ಬಹಳ ಹಿಂದಿನಿಂದಲೂ ಕಾಪಾಡಿಕೊಂಡು ಬಂದಿತ್ತು. ಆದರೆ ಸಾರ್ವಜನಿಕರಿಗೆ ಲಭ್ಯವಾಗಿರಲಿಲ್ಲ. ಶ್ರೀ ಶಾಂತಿಪ್ರಸಾದ್ ಜೈನ್ ಮತ್ತು ಶ್ರೇಯಾಂಸ್ ಪ್ರಸಾದ್ ಜೈನ್‌ರು ತಮ್ಮ ಮಾತೋಶ್ರೀ ದಿವಂಗತ ಶ್ರೀಮತಿ ಮೂರ್ತಿ ದೇವಿಯವರು ಈ ಗ್ರಂಥ ಪ್ರಕಟವಾಗಬೇಕೆಂಬ ಅಭಿಲಾಷೆಯನ್ನು ಪೂರೈಸಲು ಸ್ಫೂರ್ತಿಗೊಂಡಿದ್ದರಿಂದ ಭಾರತೀಯ ಜ್ಞಾನಪೀಠ ಸ್ಥಾಪನೆಯಾಯಿತು.

ಈಗ ಮೂಡುಬಿದಿರೆಯಲ್ಲಿ ನಡೆಯುವ 71ನೇ ಅಖಿಲ ಭಾರತ ಕನ್ನಡ ಸಮ್ಮೇಳನವೂ ಇಂತಹ ಅನೇಕ ಶ್ರೀಮಂತ ಸಾಹಿತ್ಯ ಸಾಹಿತ್ಯಕ್ಕೆ ಸ್ಫೂರ್ತಿ, ಚೈತನ್ಯ ತುಂಬಿ ಕನ್ನಡ ಸಾಹಿತ್ಯವನ್ನು ಲೋಕೋತ್ತರವಾಗಿಸಲಿ ಎಂದು ಆಶಿಸುತ್ತಾ ಸಮ್ಮೇಳನವು ಎಲ್ಲ ರೀತಿಯಿಂದಲೂ ಯಶಸ್ವಿಯಾಗಲಿ ಎಂದು ನೇಸರು ಹಾರೈಸುತ್ತದೆ.

- ಬಿ.ನಾಗಭೂಷಣ್

# ಭಾರತೀಯ ಕಲೆ

ಭಾಗ - 19

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎಸ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖಿ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.


ಹಿರೇಹಡಗಲಿಯ ಕಲ್ಲೇಶ್ವರ ದೇವಾಲಯದ ಮಹಿಷಾಸುರ ಮರ್ದಿನಿಯ ಶಿಲಾ ಫಲಕವು ಚಾಲುಕ್ಯರ ಶಿಲ್ಪ ಕಲಾವೈಭವದ ಮತ್ತೊಂದು ಉತ್ತಮ ಮಾದರಿ ಎನಿಸಿದೆ. ದೇವಿಗೆ ಎಂಟು ಕೈಗಳಿದ್ದು, ಬೆನ್ನಿನಲ್ಲಿ ಬಾಣಗಳು ತುಂಬಿದ ಬತ್ತಳಿಕೆ ಇದೆ. ಚಿಕ್ಕ ಆಕೃತಿಯಲ್ಲಿ ತೋರಿಸಿರುವ ಮಹಿಷಾಸುರನ ತಲೆಯ ಮೇಲೆ ಆಕೆಯ ಬಲಗಾಲು ನಿಂತಿದೆ. ಬಲಗಡೆಯಲ್ಲಿ ದೇವಿಯ ವಾಹನ ಸಿಂಹದೊಂದಿಗೆ ಕಾದಾಡುತ್ತಿರುವನು. ದೇವಿಯ ಕುತ್ತಿಗೆಯ ತುಂಬಾ ಬಗೆಬಗೆಯ ಕೊರಳ ಹಾರಗಳಿವೆ. ಇದೇ ದೇವಾಲಯದಲ್ಲಿರುವ ನಾಲ್ಕು ಕೈಗಳ ಸರಸ್ವತಿಯ ಪ್ರತಿಮೆಯನ್ನು ಮೇಲಿನ ಶೈಲಿಯಲ್ಲೇ ಕೆತ್ತಲಾಗಿದೆ. ಒಂದು ಹಂಸಪಕ್ಷಿಯ ಆಧಾರದ ಮೇಲೆ ಇರುವ ಸಿಂಹಾಸನದ ಮೇಲೆ ಸರಸ್ವತಿಯು ಕುಳಿತಿರುವಳು. ಆಕೆಯ ಕಿರೀಟದ ಸುತ್ತಲೂ ಸುರುಳಿಯಾಕಾರದ ಚಿತ್ತಾರದ ಕೆತ್ತನೆಯಿಂದ ಅಲಂಕಾರವಿದೆ. ಶಿಲ್ಪಕಲೆಯು ತನ್ನ ಉತ್ತಮ ದೆಶೆಯನ್ನು ಚಾಲುಕ್ಯರ ಕಾಲದಲ್ಲಿ ತಲುಪಿತ್ತು ಎಂಬುದಕ್ಕೆ ಈ ದೇವಾಲಯಗಳ ಕೆತ್ತನೆಗಳೇ ಸಾಕ್ಷಿಯಾಗಿ ಇಂದಿಗೂ ನಮ್ಮ ಕಣ್ಣ ಮುಂದೆ ರಾರಾಜಿಸುತ್ತಿವೆ.

## ಹೊಯ್ಸಳರು

ಹೊಯ್ಸಳರು ಮೂಲತಃ ಕಲ್ಯಾಣದ ಚಾಲುಕ್ಯರಿಗೆ ಸಾಮಂತರಾಗಿದ್ದು, ಕ್ರಮೇಣ ಬಲಿಷ್ಠರಾಗಿ ಸ್ವತಂತ್ರರಾದರು. ಬಿಟ್ಟಿದೇವನ ನಾಯಕತ್ವದಲ್ಲಿ ಈ ವಂಶವು ಅಧಿಕಾರಕ್ಕೆ ಬಂದುದಲ್ಲದೆ, ರಾಮಾನುಜಾಚಾರ್ಯರ ಪ್ರಭಾವಕ್ಕೊಳಗಾಗಿ ಇವರು ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನೆಂಬ ಹೆಸರನ್ನು ಪಡೆದರು. ಹೊಯ್ಸಳರು ಬೇಲೂರು, ಹಳೇಬೀಡು, ಸೋಮನಾಥಪುರ ಹಾಗೂ ಇನ್ನೂ ಕೆಲವು ದೇವಾಲಯಗಳಿಗೆ ಪೋಷಕರಾಗಿದ್ದರು. ಈ ದೇವಾಲಯಗಳಲ್ಲಿ ಕಣ್ಣಿಗೆ ಹಬ್ಬವನ್ನುಂಟು ಮಾಡುವ ಉತ್ಕೃಷ್ಟ ಶಿಲ್ಪಕಲಾ ಕೃತಿಗಳನ್ನು ಇಂದಿಗೂ ನಾವು ನೋಡುತ್ತೇವೆ. ಈ ಕೆತ್ತನೆಗಳಿಗೆ ಅವಶ್ಯಕತೆ ಇರುವ ಶಿಲೆಗಳು ಸುತ್ತಲಿನ ಪ್ರದೇಶದಲ್ಲೇ ಸಿಗುತ್ತವೆ. ಈ ಕಲ್ಲು ಭೂಮಿಯಿಂದ ಹೊರತೆಗೆಯುವಾಗ ಮೃದುವಾಗಿದ್ದು, ನಂತರ ಗಾಳಿ ಸೋಂಕಿದಂತೆಲ್ಲಾ ಕಠಿಣವಾಗುವ ಗುಣವಿರುವುದರಿಂದ ಶಿಲ್ಪಕಲಾವಿದರಿಗೆ ಶ್ರೇಷ್ಠವೆನಿಸಿದೆ. ತುಂಬಾ ಸೂಕ್ಷ್ಮವಾದ ಕುಸುರಿ ಅಲಂಕಾರಗಳನ್ನು ಕೂಡ ಕೆತ್ತುವುದಕ್ಕೆ ಕಲಾವಿದರಿಗೆ ಸುಗಮವಾಯಿತು. ಇವರು ನಿರ್ಮಿಸಿದ ದೇವಾಲಯ ಕಟ್ಟಡಗಳು ಎತ್ತರವಾದ ಮೇಲ್ಪಾಯ ಹೊಂದಿದ್ದು, ಈ ಮೇಲ್ಪಾಯದಲ್ಲಿ ಒಂದರ ಮೇಲೊಂದು ಅಲಂಕಾರಪಟ್ಟಿಗಳನ್ನು ಕೆತ್ತಲಾಗಿದೆ. ಮೇಲ್ಪಾಯದ ಸುತ್ತಲೂ ಈ ಅಲಂಕಾರ ಪಟ್ಟಿಗಳನ್ನು ಕಾಣುತ್ತೇವೆ. ಈ ಪಟ್ಟಿಗಳು ಒಂದರ ಮೇಲೊಂದು ಇದ್ದು ಐದಾರು ಪಟ್ಟಿಗಳನ್ನು ಕೆತ್ತಲಾಗಿದೆ. ಒಂದೊಂದು ಪಟ್ಟಿಯಲ್ಲಿ ಒಂದೇ ಬಗೆಯ ನಕ್ಷಾ ಚಿತ್ರಗಳನ್ನು ರಚಿಸಿದ್ದು, ಒಂದು ಪಟ್ಟಿಯ ರಚನೆ ಮತ್ತೊಂದರಲ್ಲಿ ಇಲ್ಲ. ಪಟ್ಟಿಗಳ ಈ ಚಿತ್ರಗಳು ಸಾಂಕೇತಿಕ ಅರ್ಥವನ್ನು ಕೊಡುತ್ತವೆ. ಹಾಗೂ ಅವುಗಳ ದರ್ಜೆಗೆ ತಕ್ಕಂತೆ ಸ್ಥಾನ ನೀಡಲಾಗಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ಮೇಲ್ಪಾಯದಲ್ಲಿ ಈ ಅಂಶಗಳನ್ನು ಕಾಣುತ್ತೇವೆ. ಕೆಳಗಿನ ಪಟ್ಟಿಯಲ್ಲಿ ಸಾಮಾನ್ಯವಾಗಿ ಆನೆಗಳ ರಚನೆಯೊಂದಿಗೆ ಪ್ರಾರಂಭವಾಗಿ ಕ್ರಮೇಣ ಕುದುರೆ ಸವಾರರೂ, ಸುರುಳಿ ಚಿತ್ರಗಳು, ಯಾಳಿಗಳು ಹಂಸಗಳು, ಪೌರಾಣಿಕ ಕತೆಗಳು - ಹೀಗೆ ಕೆಳಗಿನಿಂದ ಮೇಲ್ಪಾಯದ ಮೇಲಿನ ಅಂಚಿನವರೆಗೆ ಈ ಅಲಂಕಾರ ಪಟ್ಟಿಗಳನ್ನು ರಚಿಸಲಾಗಿದೆ. ಅಲಂಕಾರ ಪಟ್ಟಿಗಳ ಹಂತದ ನಂತರ ಗೂಡುಗಳು ಪ್ರಾರಂಭವಾಗುತ್ತವೆ. ಪ್ರತಿ ಗೂಡಿನಲ್ಲಿ ದೇವರುಗಳ ಪ್ರತಿಮೆಗಳನ್ನು ಕಾಣುತ್ತೇವೆ. ಈ ಪಟ್ಟಿಗಳು, ಗೂಡುಗಳು ದೇವರುಗಳ ಮೂರ್ತಿ ಶಿಲ್ಪಗಳು ಹಾಗೂ ಅವುಗಳ ಜೋಡಣೆ, ಹೊಯ್ಸಳರ ಕಾಲದ ಶಿಲ್ಪಿಗಳ ನೈಪುಣ್ಯ, ಕಲಾಭಿರುಚಿ ಮತ್ತು ದೈವಭಕ್ತಿ ಮುಂತಾದ ಉದಾತ್ತ ಗುಣಗಳನ್ನು ವ್ಯಕ್ತಪಡಿಸುತ್ತವೆ.

ಹೊಯ್ಸಳರ ಶಿಲ್ಪಕಲೆಯಲ್ಲಿ ನಾವು ಒಂದು ಬಗೆಯ ಪ್ರತ್ಯೇಕತೆಯನ್ನು ಕಾಣುತ್ತೇವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಶಿವನನ್ನೇ ಉದಾಹರಣೆಗೆ ತೆಗೆದುಕೊಳ್ಳಿ. ಶಿವನು ಇಲ್ಲಿ ಕುಳ್ಳಗೆ, ನೆಲಕ್ಕೆ ಅಂಟಿಕೊಂಡು ಕುಳಿತಿರುವನು. ಅಭಂಗ ಭಂಗಿಯಲ್ಲಿದ್ದಾನೆ. ಆತನ ತಲೆಯ ಶೃಂಗಾರ ದೊಡ್ಡದಾಗಿದ್ದು ಒಂದು ಗೂಡಿನ ತರಹ ಇದೆ, ತಲೆಯ ಮೇಲೆ. ಗೂಡಿನಂತಿರುವ ಸ್ಥಳದಲ್ಲಿ ಸುರುಳಿಯಾಕಾರದ ಚಿತ್ತಾರವನ್ನು ಕೆತ್ತಲಾಗಿದೆ. ಬಹುಶಃ ಈ ಸುರುಳಿಯಲಂಕಾರವನ್ನು ಕಲ್ಯಾಣದ ಚಾಲುಕ್ಯರ ಕಾಲದ ಶಿಲ್ಪ ಕಲಾವಿದರ ಶೈಲಿಯನ್ನು ಇವರು ಅನುಕರಿಸಿರಬಹುದು. ಏಕೆಂದರೆ ಇದೇ ಬಗೆಯ ಅಲಂಕಾರ ಶೈಲಿಯನ್ನು ನಾವು ಗದಗ ಮತ್ತು ಬೆಳಗಾವಿಯ ಕೆಲವು ದೇವಾಲಯಗಳಲ್ಲಿ ಕಾಣುತ್ತೇವೆ. ಶಿವನು ವಿನಾಶದ ದೇವರಾಗಿ ಕಾಣುತ್ತಿಲ್ಲ, ಆಭರಣಗಳ ಅಲಂಕಾರದಲ್ಲಿ ಮುಳುಗಿಸಿ ಬಿಟ್ಟಿರುವುದರಿಂದ ಮುಖವೇ ಸರಿಯಾಗಿ ಕಾಣಿಸುತ್ತಿಲ್ಲ. ಕಾಣಿಸಿಕೊಂಡಿರುವ ಮುಖದಲ್ಲಿ ಅಗಲವಾದ ಚಪ್ಪಟೆ ಮೂಗು, ಕೋರೈಸುವ ಕಣ್ಣುಗಳು, ತುಸು ಮುಂದೆ ಬಂದಿರುವ ಕೋರೆಹಲ್ಲು ಮತ್ತು ಭೀಕರತೆಯನ್ನು ಹೊಸಸೂಸುತ್ತಿರುವ ಮುಖಭಾವ ಎಲ್ಲವೂ ನೈಜವಾಗಿ ಮೂಡಿಬಂದಿವೆ.

ಸಾಮಾನ್ಯವಾಗಿ ಎಲ್ಲಾ ಮೂರ್ತಿಶಿಲ್ಪಗಳಿಗೂ ಬಗೆಬಗೆಯ ಆಭರಣಗಳ ಅಲಂಕಾರ ಮಾಡಲಾಗಿದೆ. ಕಿರೀಟವನ್ನು ಕೂಡಾ ಆಭರಣಗಳ ಮುದ್ದೆಯನ್ನಾಗಿ ತೋರಿಸಲಾಗಿದೆ. ತಡಿಕೆಗಳಲ್ಲಿ, ಮುತ್ತುರತ್ನಗಳನ್ನು ಪೋಣಿಸಿದ ಹಾಗೆ ಕಾಣುತ್ತದೆ. ಅನೇಕ ವಿಧವಾದ ಕಂಠಾಭರಣಗಳು, ಅಗಲವಾದ ಭುಜಪಟ್ಟಿಗಳು, ಕೇಯೂರಗಳು, ಸೊಂಟಪಟ್ಟಿಗಳು, ಪಾದಸರಗಳು



ಮುಂತಾದ ಅಲಂಕಾರಿಕ ಆಭರಣಗಳನ್ನು ಮೈತುಂಬಾ ಕಾಣುತ್ತೇವೆ. ಎತ್ತರದಲ್ಲಿ ಮೂರ್ತಿಗಳು ಚಿಕ್ಕವಿದ್ದು, ಆಭರಣಗಳ ರಾಶಿಯೇ ಮೈಮೇಲೆ ತುಂಬಿರುವುದರಿಂದ ಮೈಯ ಗಾತ್ರಕ್ಕೂ ಆಭರಣಗಳ ಭಾರಕ್ಕೂ ತುಸು ಅಸಹಜ ಪರಿಮಾಣ ಎದ್ದು ಕಾಣುತ್ತದೆ. ಆದರೂ ಆಭರಣಗಳ ಕೆತ್ತನೆಯಲ್ಲಿ ಕಲಾವಿದನ ಜಾಣ್ಮೆ, ಕಾರ್ಯಕುಶಲತೆ, ಅನುಭವ ಶೀಲತೆಗಳು ಪ್ರತಿ ನೋಡುಗನಿಗೂ ತಿಳಿಯುತ್ತದೆ.

ಹಳೇಬೀಡಿನ ಹೊಯ್ಸಳೇಶ್ವರನ ಗುಡಿಯಲ್ಲಿಯೇ ಮಹಿಷಾಸುರ ಮರ್ದಿನಿ ಅಂಕಣವಿದ್ದು, ಶಿವನ ವಿಗ್ರಹದಲ್ಲಿ ಕಾಣುವ ಆಭರಣಗಳ ಸಂಗ್ರಹ ಮಹಿಷಾಸುರ ಮರ್ದಿನಿಯಲ್ಲಿ ಕಾಣುವುದಿಲ್ಲ. ದೇವಿಯನ್ನು ಸರಳವಾಗಿ ಕಾಣಿಸಿದ್ದರೂ, ಒಬ್ಬ ರಾಕ್ಷಸನನ್ನು ಕೊಲ್ಲುತ್ತಿರುವಾಗ ಕಾಣಿಸಬೇಕಾದಂತಹ



ಭೀಕರತೆ, ಕೋಪಗಳು ಕಾಣಿಸುತ್ತಿಲ್ಲ. ಐಹೊಳೆ, ಮಹಾಬಲಿಪುರಂಗಳಲ್ಲಿ ನಾವು ಕಾಣುವ ಮಹಿಷಾಸುರ ಮರ್ದಿನಿ ಇಲ್ಲಿಲ್ಲ. ಇಲ್ಲಿ ಮಹಿಷಾಸುರ ಮರ್ದಿನಿಯನ್ನು ಒಬ್ಬ ನೃತ್ಯಗಾರ್ತಿಯಂತೆ ರಚಿಸಲಾಗಿದ್ದು ಮಹಿಷನನ್ನು ಕೊಲ್ಲುವಲ್ಲಿ ಯಾವ ಉತ್ಸಾಹವವೂ ತೋರುತ್ತಿಲ್ಲವೇನೋ ಎಂಬಂತಿದೆ. ಮಹಿಷನನ್ನೂ ಕೂಡ ಇದೇ ರೀತಿಯಲ್ಲಿ ಪೌರುಷ, ಕಾದಾಡುವ ಛಲ ತೋರದಂತೆ ಸೃಷ್ಟಿಸಲಾಗಿದೆ.

ಮಹಿಷಾಸುರ ಮರ್ದಿನಿಯಲ್ಲಿ ನಮಗೆ ಕಾಣದ ಚಲನೆ ಇದೇ ದೇವಸ್ಥಾನದಲ್ಲಿರುವ ವೀಣಾಧರ ಸರಸ್ವತಿಯ ಮೂರ್ತಿ ಶಿಲ್ಪದಲ್ಲಿ ಕಾಣುತ್ತೇವೆ. ಎಂಟು ಕೈಗಳುಳ್ಳ ಶಾರದೆ ತನ್ನ ಬಲ ಮತ್ತು ಎಡಗೈಗಳಲ್ಲಿ ಸಂಗೀತ ವಾದ್ಯ ಹಿಡಿದ್ದಾಳೆ. ಬಲಗಾಲ ಮೇಲೆ ನಿಂತು, ತುಸು ಬಾಗಿ, ಎಡಗಾಲನ್ನು ಎತ್ತಿ ನೃತ್ಯ ಮಾಡುತ್ತಿರುವಳು. ಆಕೆಯ ಪಾದದ ಹತ್ತಿರ ಹಂಸವೊಂದಿದ್ದು, ತುಂಬಾ ಚಿಕ್ಕ ಆಕೃತಿಯನ್ನು ಹೊಂದಿದೆ. ಸರಸ್ವತಿಯನ್ನು ತೋರಿಸಿದ ಎತ್ತರಕ್ಕೂ, ಹಂಸವನ್ನು ತೋರಿಸಿದ ಆಕೃತಿಗೂ ಸಾಮರಸ್ಯವಿಲ್ಲದೆ, ಅಸಹಜತೆ ತೋರಿದೆ.

ಬೇಲೂರಿನ ಚೆನ್ನಕೇಶವ ದೇವಾಲಯ ಹೊಯ್ಸಳರ ಕಲಾಜಗತ್ತಿಗೆ ಕೇಂದ್ರ ಬಿಂದುವಾಗಿದೆ. ಮೂವರು ನರ್ತಕಿಯರು ಶಿವನ ನೃತ್ಯಭಂಗಿಗಳನ್ನು ಅನುಕರಿಸುವ ರೀತಿಯಲ್ಲಿ ಅವರ ನಾಟ್ಯಭಂಗಿ ಕಾಣಿಸಿದೆ. ಸರಸ್ವತಿ ನೃತ್ಯಭಂಗಿಯು ಕೂಡ ಶಿವನ ನೃತ್ಯ ಭಂಗಿಯನ್ನೇ ಹೋಲುತ್ತದೆ. ಒಂದು ಕಾಲು ಮೇಲಕ್ಕೆತ್ತಿದ್ದು ಮತ್ತೊಂದು ಕಾಲು ನೆಲಕ್ಕಂಟಿದೆ. ಸುರುಳಿಯಲಂಕಾರದ ಕೆತ್ತನೆ, ಇಲ್ಲಿ ಮೇಲಕ್ಕೆ ಕಾಣುತ್ತದೆ. ಮುಂದಿನ ಅಂಕಣದಲ್ಲಿ ಸರಸ್ವತಿಯನ್ನು ವೀಣೆ ನುಡಿಸುವಂತಿರುವ ಹಾಗೆ ತೋರಿಸಲಾಗಿದೆ. ಮೂರನೆ ಪ್ರತಿಮೆ ಶಿವನನ್ನು ಪ್ರತಿನಿಧಿಸುತ್ತದೆ. ಇಲ್ಲಿ ಶಿವನನ್ನು ಭೀಕರ ಪುರುಷನನ್ನಾಗಿ ತೋರಿಸಿದ್ದು, ನಾಟ್ಯ ಭಂಗಿಯಲ್ಲಿ ಕೆತ್ತಲಾಗಿದೆ. ಅಪಸ್ಮಾರ ಪುರುಷನೆಂಬ ರಾಕ್ಷಸನನ್ನು ಕೊಲ್ಲುತ್ತಿದ್ದಾನೆ. ಇಲ್ಲಿ ಕೋಪ, ಶಿಕ್ಷಿಸುವ ಭಾವನೆ ಮುಂತಾದ ಸಹಜಗುಣಗಳು ಶಿವನಲ್ಲಿ ಎದ್ದು ಕಾಣಸುತ್ತವೆ.

ಶಿವನ ಭಂಗಿಗಳಂತೆ ಇಲ್ಲದೆ ಈ ದೇವಾಲಯದ ಗರುಡನೂ ಸಮಭಂಗಿಯಲ್ಲಿ ಕೆತ್ತಿ ತೋರಿಸಲಾಗಿದೆ. ಗರುಡನ ಕಟ್ಟಿದ ಕೈಗಳು, ಬಿಚ್ಚಿದ ರೆಕ್ಕೆಗಳು, ಉಡುಪಿನ ಮಡಿಕೆಗಳು ತುಂಬಾ ಸಹಜವಾಗಿ ಕಾಣುತ್ತವೆ. ಆತನ ದೊಡ್ಡ ಕಣ್ಣುಗಳು ಸ್ವರ್ಗದ ಕಡೆಗೆ ನೋಡುತ್ತಿವೆ. ಬಾಗಿದ ಹುಬ್ಬುಗಳು, ಮುಖದಲ್ಲಿ ಕಾಣುವ ಭಕ್ತಿಭಾವ, ತನ್ನ ಯಜಮಾನನಾದ ವಿಷ್ಣುವನ್ನು ಸ್ಮರಿಸುತ್ತಿರುವಂತಿದೆ. ಗರುಡನ ಮಣಿಕಟ್ಟು, ಮುಂಗೈಗಳಿಗೆ ಸರ್ಪಸುತ್ತಿಕೊಂಡಿದೆ. ಸೊಂಟವನ್ನು ಆಭರಣಗಳ ಪಟ್ಟಿಯಿಂದ ಅಲಂಕರಿಸಲಾಗಿದೆ. ಹೊಯ್ಸಳರ ಕಾಲದ ಶಿಲ್ಪಿಗಳು ತಮ್ಮ ಕೆಲಸಕ್ಕೆ ಆರಿಸಿಕೊಂಡ ಕಲ್ಲಿನ ಮಾದರಿ, ಕೆತ್ತನೆಯಲ್ಲಿ ಅವರು ತೋರಿದ ಕಾರ್ಯಕುಶಲತೆ ಮುಂದಿನ ಪೀಳಿಗೆಯ ಶಿಲ್ಪ ಕಲಾವಿದರಿಗೆ ಉತ್ತಮ ಅನುಕರಣೀಯ ಮಾರ್ಗವೆಂದು ಹೇಳಬಹುದು.

ಪಲ್ಲವರು

ಪಲ್ಲವರು ಕ್ರಿ.ಶ. ೬ ರಿಂದ ೧೧ನೇ ಶತಮಾನದವರೆಗೆ ದಕ್ಷಿಣ ಭಾರತದಲ್ಲಿ ಉತ್ತರದಲ್ಲಿ ಕೃಷ್ಣನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೆ ಹರಡಿರುವ ವಿಶಾಲ ಪ್ರದೇಶವನ್ನು ಆಳಿದರು. ಸಿಂಹವಿಷ್ಣು ಅವನಿಸಿಂಹನೆಂಬುವವನು ಪಲ್ಲವ ವಂಶವನ್ನು ಸ್ಥಾಪಿಸಿ, ಕಾಂಚಿಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಹಲವಾರು ಕಡೆಗೆ ಹರಡಿಕೊಂಡಿರುವ ಶಾಸನಗಳು ಈ ವಂಶಜರು ಕಲೆಗಳನ್ನು ಪ್ರೀತಿಸಿದರಲ್ಲದೆ, ಅನೇಕ ಕಲಾವಿದರಿಗೆ ಪ್ರೋತ್ಸಾಹ ನೀಡಿದರು. ಇವರ ಆಡಳಿತವು ಆಂಧ್ರಪ್ರದೇಶದವರೆಗೆ ಹರಡಿದ್ದುದರಿಂದ ಅಮರಾವತಿ ಸಂಪ್ರದಾಯ ಕಲಾವಿದರಲ್ಲಿ ಪ್ರಭಾವ ಬೀರಿತ್ತು. ಪಲ್ಲವರಲ್ಲಿ ಅತೀ ಪ್ರಾಮುಖ್ಯರಾದವರಲ್ಲಿ ಒಂದನೆಯ ಮಹೇಂದ್ರ ವರ್ಮನೂ ಒಬ್ಬನು. ಅನೇಕ ಕಲೆಗಳನ್ನು ಬೆಳೆಯಲು ಶ್ರಮವಹಿಸಿದನು. ಇವನ ಮಗನಾದ ಮೊದಲನೇ ನರಸಿಂಹವರ್ಮನು ದೇವಾಲಯಗಳನ್ನು ನಿರ್ಮಿಸಲು ಒಂದು ಹೊಸ ಪದ್ಧತಿಯನ್ನು ಜಾರಿಯಲ್ಲಿ ತಂದನು. ಎಲ್ಲೆಲ್ಲಿ ಏಕಶಿಲಾ ಬೆಟ್ಟಗಳು ಕಾಣಿಸುತ್ತವೆಯೋ, ಅಲ್ಲಿ ಶಿಲ್ಪಿಗಳನ್ನು ಕಳುಹಿಸಿ ಕಲ್ಲನ್ನೇ ಕೊರೆದು ಅಲ್ಲಿಯೇ ಮಂಟಪ, ಮೂರ್ತಿ ಶಿಲ್ಪಗಳನ್ನು ತಯಾರುಗೊಳಿಸುವ ಸೌಕರ್ಯ ಒದಗಿಸಿಕೊಟ್ಟನು. ಮಹಾಬಲಿಪುರಂನಲ್ಲಿರುವ ಕಿರಾತಾರ್ಜುನೀಯ (ಗಂಗಾವರೋಹಣ) ಹಾಗೂ ಇನ್ನಿತರ ಶಿಲ್ಪಗಳ ಸಮುಚ್ಚಯ ಇದಕ್ಕೆ ಉದಾಹರಣೆ. ದ್ರಾವಿಡ ಸಂಸ್ಕೃತಿಯ ಶಿಲ್ಪಕಲೆಯ ಪ್ರಭಾವವು ಕಾಣಿಸಿಕೊಳ್ಳಲು ಪ್ರಾರಂಭವಾಯಿತು. ಪಲ್ಲವರ ಕಾಲದ ಶಿಲ್ಪಗಳು ಅಮರಾವತಿಯ ಶಿಲ್ಪಗಳ ಮಾದರಿಯನ್ನೇ ಅಂದರೆ ಉದ್ದ, ತೆಳುವು, ನಮ್ರತೆ ಮತ್ತು ರಮ್ಯತೆಗಳನ್ನು ಉಳಿಸಿಕೊಂಡಿದ್ದರೂ ಮೂರ್ತಿ ಶಿಲ್ಪಗಳ ಆಕಾರ ಹೆಚ್ಚು ಘನತೆ ಮತ್ತು ವಿನಯಗಳಿಂದ ಕೂಡಿದೆ. ಪಲ್ಲವರು ಸಹಜತೆ ಮತ್ತು ಸರಳತೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವವರಾದ್ದರಿಂದ, ಅವರ ಶಿಲ್ಪಕಲೆಯಲ್ಲಿ ಅಸಾಧಾರಣ ಸೌಂದರ್ಯ ಎದ್ದು ಕಾಣುತ್ತದೆ. ಇವರ ಸಮಕಾಲೀನ ಎಲ್ಲೋರಾ ಶೈಲಿಯು ಇವರ ಶಿಲ್ಪ ಕೃತಿಗಳಲ್ಲಿ ಕಾಣಲಾರೆವು. ಏಕೆಂದರೆ ಎಲ್ಲೋರಾದಲ್ಲಿ ನೆರಳು ಬೆಳಕುಗಳ ಸೂಕ್ಷ್ಮ ಶಿಲ್ಪ ಶೈಲಿಯಲ್ಲಿ ಇವರಿಗೆ ನಂಬಿಕೆ ಇರಲಿಲ್ಲ. ಇವರಿಗೆ ಅಸಹಜತೆ, ಕೃತ್ರಿಮ ತಾಂತ್ರಿಕತೆ ಇಷ್ಟವಿಲ್ಲ. ಪ್ರಾಣಿಗಳ ರಚನೆಯಂತೂ ತುಂಬಾ ವಾಸ್ತವವಾಗಿ ಮೂಡಿಬಂದಿದೆ. ಶಿಲ್ಪಿಗಳಲ್ಲಿ ತಮ್ಮ ಸುತ್ತಲೂ ಇರುವ ಜಗತ್ತಿನ ಬಗ್ಗೆ ಸಾಕಷ್ಟು ತಿಳುವಳಿಕೆಯೂ ಜೊತೆಗೆ ಹಾಸ್ಯ ಪ್ರಜ್ಞೆಯೂ ಇತ್ತೆಂಬುದು 'ಗಂಗಾವ ರೋಹಣ'ವೆಂಬ ಶಿಲ್ಪ ಕಲಾಖಂಡದಲ್ಲಿ ಹಲವಾರು ಉದಾಹರಣೆಗಳು ಕಾಣುತ್ತವೆ. ಒಂದು ಬೆಕ್ಕು ಒಬ್ಬ ತಪಸ್ವಿಯನ್ನು ಅಣಕಿಸುತ್ತಿದ್ದರೆ, ಇಲಿಗಳು ತಮಾಷೆಯಿಂದ ಅತ್ತಿತ್ತ ಓಡಾಡುತ್ತಿವೆ. ಒಂದು ಮಂಗವು ತನ್ನ ಸಂಗಾತಿ ಹುಪ್ಪಳವನ್ನು ಸ್ವಚ್ಛಗೊಳಿಸುತ್ತಿದ್ದರೆ, ಅದು ತನ್ನ ಮಗುವಿಗೆ ಹಾಲುಣಿಸುತ್ತಿದೆ. ಒಂದು ಜಿಂಕೆಯು ತನ್ನ ಹಿಂಗಾಲುಗಳಿಂದ ತನ್ನ ಮೂಗನ್ನು ತುರಿಸಿಕೊಳ್ಳುತ್ತಿದೆ. ಆನೆಮರಿಗಳು ತಮ್ಮ ಹಿರಿಯರ ಕಾಲುಗಳ ಮಧ್ಯೆ ನಿಂತು ಆಶ್ರಯ ಪಡೆದಿವೆ. ಮತ್ತೊಂದು ಕಡೆ ಗುಹೆಯಿಂದ ಈ ದೃಶ್ಯಗಳನ್ನು ಒಂದು ಜೋಡಿ ಜಿಂಕೆಗಳು ನೋಡುತ್ತಿವೆ.

ಮಾನವ ಮತ್ತು ದೇವರ ಆಕಾರಗಳನ್ನು ರಚಿಸುವಲ್ಲಿ ಯಾವುದೇ ಬಗೆಯ ಪೂರ್ವಾಗ್ರಹವನ್ನು ವ್ಯಕ್ತಗೊಳಿಸಿರುವುದಿಲ್ಲ. ವಾಸ್ತವತೆಯನ್ನು

ಪ್ರತಿಪಾದಿಸುವುದೇ ಈ ಶಿಲ್ಪ ಕಲಾವಿದರ ಹೆಗ್ಗುರಿಯಾಗಿರಬೇಕು. ವಿಶಾಲ ಎದೆ, ಎತ್ತರವಾದ ತೆಳ್ಳಗಿನ ಮೈ, ಕೊಳವೆಯಾಕಾರದ ಕೈಕಾಲುಗಳು ಪುರುಷರದ್ದಾಗಿದ್ದರೆ, ಎತ್ತರದ ಮತ್ತು ಅತಿ ತೆಳ್ಳಗಿನ ಶರೀರ, ಕಿರಿದಾದ ಎದೆ ಹಾಗೂ ತೋಳುಗಳು ಮತ್ತು ತೆಳುವಾದ ನಡು ಸ್ತ್ರೀಯರ ಲಕ್ಷಣಗಳು. ಗಂಡಸರ ಮುಖಭಾವದಲ್ಲಿ ಗಾಂಭೀರ್ಯ ಮತ್ತು ಶೌರ್ಯ ಕಂಡು ಬಂದರೆ, ಸ್ತ್ರೀಯರಲ್ಲಿ ಸೌಮ್ಯತೆ ಮತ್ತು ನಾಚಿಕೆ ಎದ್ದು ಕಾಣುತ್ತವೆ. ಇಬ್ಬರಲ್ಲೂ ತೊಡುಗೆ ಮತ್ತು ಆಭರಣಗಳ ಅಲಂಕಾರ ತುಂಬಾ ಕಡಿಮೆ. ಪಲ್ಲವರಮೂರ್ತಿ ಶಿಲ್ಪಗಳಲ್ಲಿ ಮೊದಲನೆಯದಾಗಿ ಸಿಕ್ಕಿರುವುದು ಮಂಡಗಪಟ್ಟು ಎಂಬಲ್ಲಿ. ಇವುಗಳಲ್ಲಿ ಹೆಚ್ಚು ವಿವರಣೆಯಾಗಲೀ, ಕಲಾನೈಪುಣ್ಯವಾಗಲೀ ಇಲ್ಲದ್ದರಿಂದ ಗಣನೆಗೆ ತೆಗೆದುಕೊಳ್ಳುವು ದನವಶ್ಯ. ಮೊಟ್ಟಮೊದಲನೆಯ ವಿವರಣಾತ್ಮಕ ಉಬ್ಬುಚಿತ್ರ ಗಂಗಾಧರ ಅಂಕಣ. ಇದು ತಿರುಚಿನಾಪಳ್ಳಿಯ ಬೆಟ್ಟದಲ್ಲಿ ಕೊರೆದ ಗವಿಯಲ್ಲಿದೆ. ಇದು ಪಲ್ಲವರ ಶಿಲ್ಪಕಲೆಯ ಒಂದು ಉತ್ತಮ ಮಾದರಿಯಾಗಿದೆ. ಶಿವನು ತುಂಬಾ ಶಾಂತಚಿತ್ತನಾಗಿ, ಮೇಲಿಂದ ಬೀಳುತ್ತಿರುವ ಬಲಿಷ್ಠ ನದಿಯನ್ನು ತನ್ನ ಎರಡು ಕುರುಳುಗಳಲ್ಲಿ ಸೆರೆಹಿಡಿಯುವುದನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಪಲ್ಲವರ ಶಿಲ್ಪಕಲಾಶೈಲಿಯ ಪ್ರಸಿದ್ಧ ಸಾದನೆ ನರಸಿಂಹವರ್ಮ ಮಾಮಲ್ಲನ ಕಾಲದಲ್ಲಿ ಎನ್ನಬಹುದು. ಮಾಮಲ್ಲಪುರಂ ಅಥ್‌ವಾ ಮಹಾಬಲಿಪುರಂನಲ್ಲಿಯ ಕೆತ್ತನೆಗಳು ಇಂದಿಗೂ ಇದಕ್ಕೆ ಸಾಕ್ಷಿಯಾಗಿವೆ. ಇಪ್ಪತ್ತೇಳು ಮೀಟರ್ ಉದ್ದ ಮತ್ತು ಒಂಬತ್ತು ಮೀಟರ್ ಎತ್ತರ ಉಳ್ಳ ದೊಡ್ಡಕಲ್ಲು ಗೋಡೆಯ ಮೇಲೆ ಕೆತ್ತಲಾಗಿರುವ ಸುಮಾರು ನೂರು ಕೆತ್ತನೆಗಳ ಸಮುಚ್ಚಯವೇ ಕಿರಾತಾರ್ಜುನೀಯ ಅಥವಾ ಗಂಗಾವರೋಹಣ ಎಂದು ಪ್ರಸಿದ್ಧಿಯಾಗಿದೆ. ಈ ಕಿರಾತಾರ್ಜುನೀಯವು ಮಹಾಭಾರತದ ಒಂದು ಕಥಾಪ್ರಸಂಗವಾಗಿದೆ. ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲಿಕ್ಕಾಗಿ ಶಿವನನ್ನು ಕುರಿತು ತಪಸ್ಸನ್ನಾಚರಿಸುತ್ತಾನೆ. ಅರ್ಜುನನು ಸತತ ಉಪವಾಸದಿಂದ ಕೃಶನಾಗಿದ್ದು, ಕೃಷ್ಣಾಜಿನವನ್ನು ಧರಿಸಿ, ಒಂಟಿ ಕಾಲಿನ ಮೇಲೆ ನಿಂತು ಸೂರ್ಯನ ಕಡೆಗೆ ನಿಟ್ಟಿಸುತ್ತಾ ಎರಡೂ ಕೈಗಳನ್ನು ಮೇಲಕ್ಕೆತ್ತಿ ಕಠೋರ ತಪವನ್ನಾಚರಿಸುತ್ತಾನೆ. ಈ ಶಿಲ್ಪವನ್ನು ರಚಿಸುವ ಕಾಲದಲ್ಲಿ ಕಿರಾತಾರ್ಜುನೀಯ ಪ್ರಸಂಗ ತಮಿಳುನಾಡಿನಲ್ಲಿ ಬಹಳ ಪ್ರಸಿದ್ಧವಾಗಿತ್ತು. ಆದರೆ ಮತ್ತೊಂದು ಮುಖ್ಯವಾದ ಪ್ರಸಂಗವನ್ನು ಅಂದರೆ ಶಿವಾರ್ಜುನರ ಕಾಳಗವನ್ನು ಇಲ್ಲಿ ಕೈಬಿಡಲಾಗಿದೆ. ಈ ಶಿಲ್ಪಕ್ಕೆ ಕಿರಾತಾರ್ಜುನೀಯ ಎನ್ನುವುದಕ್ಕಿಂತಲೂ ಗಂಗಾವರೋಹಣ ಎನ್ನುವುದೇ ತುಂಬಾ ಸೂಕ್ತವಾದದ್ದು, ಏಕೆಂದರೆ ಫಲಕದ ಮೇಲ್ಭಾಗದಲ್ಲಿ ಶಿವನ ಜಟೆಯಿಂದ ಗಂಗೆಯು ನದೀ ರೂಪದಲ್ಲಿ ಇಳಿದುಬರುವುದನ್ನು ಬಹಳ ಸೊಗಸಾಗಿ ಕೆತ್ತಲಾಗಿದೆ. ಮೂರ್ತಿಶಿಲ್ಪಗಳ ಆಕಾರದಲ್ಲಿ ಜೀವಂತಿಕೆ ಇದೆ. ವಾಸ್ತವತೆ ಇದೆ. ಸೊಬಗಿದೆ. ಎಲ್ಲಕ್ಕೂ ಮಿಗಿಲಾಗಿ ಕಲಾಪ್ರೌಢಿಮೆ ಎದ್ದು ಕಾಣುತ್ತದೆ. ಶ್ರೀಲಂಕಾದ ಅನುರಾಧಪುರದಲ್ಲಿ ಇಂಥದೇ ಶಿಲ್ಪವಿದ್ದು, ಜೊತೆಗೆ ಶಿವಾರ್ಜುನರ ಕಾಳಗದ ಸಂದರ್ಭವನ್ನು ಕೆತ್ತಲಾಗಿದೆ.

ಏಕ ಶಿಲೆಯ ಮುಂದುಗಡೆ ಗಂಗಾವರೋಹಣ ಶಿಲ್ಪವಿದ್ದು ಹಿಂಭಾಗದಲ್ಲಿ ವರಾಹ ಮಂಟಪವಿದೆ. ಈ ಮಂಟಪದಲ್ಲಿ ವರಾಹನುಭೂಮಿಯನ್ನು ಸಮುದ್ರದಿಂದ ಎತ್ತುತಿರುವುದು, ಕಮಲದಲ್ಲಿ ಕುಳಿತಿರುವ ಗಜಲಕ್ಷ್ಮಿಗೆ ಆನೆಗಳು ಸ್ನಾನ ಮಾಡಿಸುತ್ತಿರುವುದು, ಚತುರ್ಭುಜ ದುರ್ಗಾ ಮತ್ತು ರಾಕ್ಷಸ ಬಲಿಯನ್ನು ತ್ರಿವಿಕ್ರಮನು ಸೋಲಿಸುತ್ತಿರುವುದು - ಈ ನಾಲ್ಕು ಅಂಕಣಗಳನ್ನು ಕೆತ್ತಲಾಗಿದೆ. ವರಾಹ ಅಂಕಣದಲ್ಲಿ, ವರಾಹನು ಶಂಖ ಚಕ್ರಧಾರಿಯಾಗಿರುವುದು, ೪ ತಲೆಗಳುಳ್ಳ ಬ್ರಹ್ಮನು ಅಭಂಗ ಶೈಲಿಯಲ್ಲಿ ಬಲಭಾಗದಲ್ಲಿ ನಿಂತಿದ್ದು ಕೈಯಲ್ಲಿ ಕಮಂಡಲವನ್ನು ಹಿಡಿದಿರುವುದು, ಇಬ್ಬರು ಯಕ್ಷಿಣಿಯರು ಕೆಳಗೆ ನೋಡುತ್ತಿರುವುದು ಮತ್ತು ಇಬ್ಬರು ಭಕ್ತರು ಆಶ್ಚರ್ಯ ಚಕಿತರಾಗಿ ನೋಡುತ್ತಿರುವುದು ಮುಂತಾದ ವ್ಯಕ್ತಿ ಚಿತ್ರಗಳನ್ನು ಸುಂದರವಾಗಿ ರಚಿಸಲಾಗಿದೆ. ಗಜಲಕ್ಷ್ಮಿ ಅಂಕಣದಲ್ಲಿ ಲಕ್ಷ್ಮಿಯು ಪಲ್ಲವ ಅರಸರ ಕಿರೀಟದ ಮಾದರಿಯನ್ನೇ ಧರಿಸಿದ್ದು ಕೊರಳಲ್ಲಿ ಸುವರ್ಣವೈಕಕ್ಷ ಎಂಬ ಮಾಲೆಯನ್ನು ಧರಿಸಿದ್ದಾಳೆ. ಇಲ್ಲಿ ಲಕ್ಷ್ಮಿಗೆ ವಸ್ತ್ರಾಭರಣ ಕಡಿಮೆ ಇದ್ದು ಹೂಮಾಲೆಗಳು ಹೆಚ್ಚಿವೆ. ದುರ್ಗಾ ಅಂಕಣದಲ್ಲಿ ದೇವಿಯು ಸಿಂಹ ಮತ್ತು ಜಿಂಕೆಯ ನಡುವೆ ನಿಂತಿದ್ದಾಳೆ. ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಕ್ತಿಯನ್ನು ಕೆಳಗಿನ ಕೈಗಳನ್ನು ಅಭಯ ಮತ್ತು ಕಟಿಯಾವಲಂಬಿತ ಮುದ್ರೆಗಳಲ್ಲಿ ಕಾಣಿಸಲಾಗಿದೆ. ಮೇಲಿರುವ ಛತ್ರಿಯು ಆಕೆಯು ಜಗನ್ಮಾಯಕಿಯೆಂಬ ಅರ್ಥವನ್ನು ಸೂಚಿಸುತ್ತದೆ. ಕೆಳಗೆ ನಿಂತಿರುವ ಇಬ್ಬರು ಭಕ್ತರಲ್ಲಿ ಒಬ್ಬನು ತನ್ನ ಶಿರವನ್ನೇ ಕಡಿದುಕೊಂಡು ಅರ್ಪಿಸುತ್ತಿರುವುದನ್ನು ಕಾಣುತ್ತೇವೆ. ಕೊನೆಯದಾದ ತ್ರಿವಿಕ್ರಮ ಅಂಕಣದಲ್ಲಿ ದೇವರ ಎಂಟು ಕೈಗಳಲ್ಲಿ ಶಂಖ, ಚಕ್ರ, ಕಠಾರಿ, ಕತ್ತಿ, ಗುರಾಣಿ ಮತ್ತು ಬಿಲ್ಲು ಮುಂತಾದ ಆಯುಧಗಳನ್ನು ಧರಿಸಿರುವನು. ಊರ್ಧ್ವ ಮತ್ತು ಅಧೋಲೋಕಗಳನ್ನು ತನ್ನ ಕಾಲುಗಳಿಂದ ಅಳೆಯುತ್ತಿದ್ದು, ಶರೀರದ ಸಮತೋಲವನ್ನು ಸರಿಪಡಿಸಿಕೊಳ್ಳಲು ಒಂದು ಕೈಯನ್ನು ಮೇಲಕ್ಕೆತ್ತಿದ್ದಾನೆ. ಮತ್ತೊಂದು ಕೈಯನ್ನು ಹಾಗೂ ಮುಂದಿನ ಕಾಲನ್ನು ಕಮಲದ ಮೇಲೆ ಆಸೀನನಾಗಿರುವ ಬ್ರಹ್ಮನ ಕಡೆಗೆ ಏಕಚಿತ್ತನಾಗಿ ತಿರುಗಿಸಿದ್ದಾನೆ. ಎಡದ ತುದಿಯಲ್ಲಿ ಶಿವನು ಕೂಡ ಕಮಲದ ಮೇಲೆ ಕುಳಿತಿರುವನು. ಆತನ ಕೆಳಗೆ ಸೂರ್ಯ, ಚಂದ್ರರು ಇದ್ದಾರೆ. ಚಂದ್ರನ ಹತ್ತಿರದಿಂದ ಬೀಳುತ್ತಿರುವ ವ್ಯಕ್ತಿಯ ಚಿತ್ರವು ಬಲಿಚಕ್ರವರ್ತಿಯು ಅಧೋಲೋಕದಲ್ಲಿ ಬೀಳುತ್ತಿರುವುದನ್ನು ತೋರಿಸಲಾಗಿದೆ.

ಇನ್ನೊಂದು ಕಡೆ ಕೃಷ್ಣ ಮಂಟಪವಿದೆ. ಇದರಲ್ಲಿ ಕೃಷ್ಣನು ಗೋವರ್ಧನಗಿರಿಯನ್ನು ಎತ್ತುತ್ತಿರುವುದನ್ನು ಸುಂದರವಾಗಿ ಕೆತ್ತಲಾಗಿದೆ. ಭೀಕರ ಸುಂಟರಗಾಳಿ ಮತ್ತು ಮಳೆಯಿಂದ ಗೋಪಗೋಪಿಯರನ್ನು ರಕ್ಷಿಸುವ ಉದ್ದೇಶದಿಂದ ತನ್ನ ಕಿರು ಬೆರಳಿನ ಮೇಲೆ ಗೋವರ್ಧನಗಿರಿಯನ್ನು ಎತ್ತಿ ಹಿಡಿದಿದ್ದಾನೆ. ಒಂದು ಕಡೆ ಒಂದು ಹಸು ತನ್ನ ಕರುವನ್ನು ಪ್ರೀತಿಯಿಂದ ನೆಕ್ಕುತ್ತಿರುವುದನ್ನೂ, ಗೋಪನು ಆ ಹಸುವಿನಿಂದ ಹಾಲುಕರೆಯುತ್ತಿರುವುದನ್ನೂ ಕಲಾತ್ಮಕವಾಗಿ ಕೊರೆಯಲಾಗಿದೆ.

ಮಹಾಬಲಿಪುರಂನಲ್ಲಿ ಸುಂದರವಾದ ಐದು ಏಕಶಿಲಾರಥಗಳ ಸಮುಚ್ಚಯವನ್ನು ಕಾಣುತ್ತೇವೆ. ದ್ರೌಪದಿ ರಥ, ಅರ್ಜುನ ರಥ, ಭೀಮ ರಥ, ಧರ್ಮರಾಯ ರಥ ಮತ್ತು ನಕುಲ ಸಹದೇವ ರಥಗಳು ಪಲ್ಲವರ ಅಲಂಕರಣಾಭಿರುಚಿಯನ್ನು ವ್ಯಕ್ತಗೊಳಿಸುತ್ತವೆ.

(ಮುಂದುವರಿದಿದೆ)

## ಪ್ರತಿರೂಪ

ಸತ್ಯದ ಸೌಂದರ್ಯತೆಯನು
ಹುಡುಕಾಯವಲಿ
ಸುಂದರ ಮುಖಗಳು
ಅಂದವನು ಕಳೆದುಕೊಳ್ಳುತಿವೆ
ಸುಳ್ಳಾಡುವ ಮೊಗಗಳು
ಸತ್ಯದ ಪ್ರತಿರೂಪಗಳಾಗಿವೆ.

- ಆರ್. ಶಿವಸಿಂಗ್
ದಾಂಡೇಲಿ (ಉ.ಕ.)

**ಪತ್ರ**

ಮಾನ್ಯ ಅಧ್ಯಕ್ಷರು ಮತ್ತು ಸರ್ವಸದಸ್ಯರು, ಮೈಸೂರು ಅಸೋಸಿಯೇಷನ್ ಮುಂಬಯಿ ಅವರಿಗೆ, ವಂದನೆಗಳು

ಮುಂಬಯಿ ಭಾರತದ ಹೆಮ್ಮೆಯ ಭಾಗ. ಅದು ಭಾರತಾಂಬೆಯ ಮುಂಬಾಯಿ. ಅಲ್ಲಿ ಸದಾ ನೆಮ್ಮದಿಯ ಬೆಳಕು ಬೆಳಕಾಗಿಯೇ ಇರಬೇಕು. ಅದೇ ನಮಗೆಲ್ಲ ದೀಪಾವಳಿಯ ಹಬ್ಬ. ಅಂತಹ ನೆಮ್ಮದಿ ಸಂಕೇತವಾಗಿ ಕಳಿಸಿದ ದೀಪಾವಳಿಯ ಸದಾಶಯದ ಕಿರಣಗಳನ್ನು ನೀಡುತ್ತಿರುವ ಪ್ರೀತಿಯ ಹಣತೆಯ ಪತ್ರವು ಲಭ್ಯವಾಗಿದೆ. ಅದಕ್ಕಾಗಿ ಧನ್ಯವಾದಗಳು. ಹಾಗೂ ಪ್ರತಿಯಾಗಿ ತಮಗೆಲ್ಲ ದೀಪಾವಳಿಯ ಶುಭಾಶಯಗಳು.

- ವಸಂತ ಕುಷ್ಟಗಿ

# Siddharama's Sonnalige (a Cultural Study)

By **Dr. G.N. Upadhya**

*Transalted to English:* **S.S. Kelwadi** *(Advocate High Court)*

Today Solapur is one of Maharashtra's famous cultural centres. This city occupies the pedestal place in the field of religion, literature, education and culture. Its original name was 'Sonnalige' or 'Sonnalapur'. Siddharam was the chieftan of the city. Sonnalige played prominent role in the 12th century in prime time of Vachana - movements and during the period of Kalyana revolution. Depicted here is the role of Sonnalige in its political, religious, historic and artistic individuality.

**Dr. G. N. Upadhya's research work on the socio-cultural aspect of 12th Century Solapur was published in the form of a book "Siddharama Sonnalige" in Kannada. Here we give a few salient aspects of the thesis for the benefit of readers in English.**

2. In my opinion, there is no city other than Sonnalige which attained fame by ceaseless efforts and tenacity of one Sharana (ardent devotee) who turned one small village into a city and a big cultural centre and a religious abode. Here is an attempt at exhibiting cultural significance of Sonnalige which was an ancient and famous place in the then Karnataka state.

3. Born in 12th century, Shivayogi Siddharam was an outstanding personality who put in his efforts for renaissance of Veerashaiva Dharma, on the progressive foundation of compassion, freedom, social work, spirited work, culture and respect etc. for construction of a new social order. He belonged to one of those new generations of Harikaras who proclaimed that the body of a Shivyogi should not be wasted without effort and workmanship should continue forever. By his glorious personality, he became a legend in his lifetime. There are several facets to his personality. This is an effort to shed light on different aspects of his inner and outer phases of life.

4. Sonnalige was the workland of Siddharam. Believing in Shiva, loving Him and remaining devoted to Him, he made adventurous efforts in turning Sonnalige into a 'New Modern Shreeshail', Historically he is known as 'Siddharam of Sonnalige'. Analysed in the light of history are the life-achievements and social reforms implemented by him. Today Solapur is one of the famous cities of Maharashtra. There is a historial research finding indiciating the pivotal place it occupied in ancient times of Karnataka's political and cultural history.

5. Kalamukh Shaivas were very influential during 12th century A.D. in South Maharashtra. They were experts in constructions, establishment and management of Mutts. But the Kalamukh Shaivas hailed from north. They won love and respect of the people and the kings wherever they established themselves. Still Kannada was not their medium of language. No evidences of their having used Kannada as their medium, are obtained anywhere.

6. Siddharam did not belong to Kalamukh Shaivas' lineage. His was the Kannada Shaiva lineage. Kannada was his sole breath. This language of the soil became his medium. Thus he established his own lineage. That is called 'Siddharama's cult. He preserved his own individuality, different from other heads of Mutts. Though it is true that he had built up Mutts, temples, tanks and canals, etc. he did not make them the centers of his administration.

7. Although he followed the model of social services of Kalamukhas he did not appease the political powers. at any time. Mutts only were important for Kalamukhas. But for the sole purpose of public welfare, Siddharam undertook the social services. Afterwards he accepted the sacrament of Veerashaiv Dharma and became famous as one among the five elements. Built herein are the strenuous efforts of achievements of Siddharam who carved out a distinct and permanent place for Sonnalige in our cultural map. Mentioned herein is the work of Kannada cultural study and findings of research available in Sonnalige.

•

## ಸುತ್ತಮುತ್ತ

### ಕುವೆಂಪು ಸ್ಮಾರಕ ಏಕಾಂಕ ನಾಟಕ ಸ್ಪರ್ಧೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ಸಂಘ ಮುಂಬಯಿ ಇವರು ಕಳೆದ ಎಂಟು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಕುವೆಂಪು ಸ್ಮಾರಕ ಏಕಾಂಕ ಕನ್ನಡ ನಾಟಕ ಸ್ಪರ್ಧೆಗಳಿಗೆ ಭಾರತದ ಎಲ್ಲಾ ಭಾಗಗಳಿಂದ ಪ್ರವೇಶಗಳನ್ನು ಆಹ್ವಾನಿಸಲಾಗಿದೆ ಹಾಗೂ ಕೇವಲ 16 ತಂಡಗಳನ್ನೇ ಆಯ್ಕೆ ಮಾಡಲಾಗುವುದು.

ಆಯ್ಕೆಯಾದ ಪ್ರತೀ ತಂಡಕ್ಕೆ ಪ್ರೋತ್ಸಾಹ ಧನವಾಗಿ ರೂ. 3000/- ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ತಂಡಗಳು ಈ ಕೆಳಗಿನ ಸೂಚನೆಗಳನ್ನು ಗಮನಿಸಬೇಕು.

1. ನಾಟಕದ ಅವಧಿ ಕನಿಷ್ಠ 45 ನಿಮಿಷಗಳಿರಬೇಕು ಗರಿಷ್ಠ 1 ಗಂಟೆ ಇರಬೇಕು.

2. ಸ್ಪರ್ಧೆಯಲ್ಲಿ ಪ್ರದರ್ಶಿಸಲ್ಪಡುವ ನಾಟಕ ಈ ಹಿಂದೆ ಎಲ್ಲೂ ಪ್ರದರ್ಶಿಸಿರಬಾರದು.

3. ಅನುವಾದ ರೂಪಾಂತರ ನಾಟಕಗಳಾದರೆ ಮೂಲ ಲೇಖಕರ ಅನುಮತಿ ಪತ್ರ ಅಗತ್ಯ.

4. ಅತ್ಯುತ್ತಮ ನಾಟಕಕ್ಕೆ ರೂ. 5000/-, ದ್ವಿತೀಯ ರೂ. 3000/-, ತೃತೀಯ ರೂ. 2000/- ಬಹುಮಾನವಿದೆ.

5. ರಂಗವಿನ್ಯಾಸ, ಬೆಳಕು, ವರ್ಣಾಲಂಕಾರ, ವೇಷಭೂಷಣ, ನಿರ್ದೇಶನ, ಸಂಗೀತ ಹೀಗೆ ವಿವಿಧ ವಿಭಾಗಗಳಿಗೆ ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುತ್ತದೆ.

ಈ ನಾಟಕ ಸ್ಪರ್ಧೆಯು ಜನವರಿ 24, 2004ರಿಂದ ಜನವರಿ 26, 2004ರ ವರೆಗೆ ನಡೆಯಲಿದೆ. ಆಸಕ್ತ ತಂಡಗಳು ರೂ. 500/-. ಪ್ರವೇಶಧನದೊಂದಿಗೆ ಡಿಸೆಂಬರ್ 15ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅರ್ಜಿ ಫಾರಂ ಪಡೆಯಬಹುದು. ಪ್ರವೇಶ ಧನವನ್ನು ಎಂ.ಓ. ಅಥವಾ ಡಿ.ಡಿ. ಮೂಲಕ ಕಳುಹಿಸಬಹುದು. ಡಿ.ಡಿ. ಮೂಲಕ ಕಳುಹಿಸುವವರು Karnataka Sanghada ಹೆಸರಿನಲ್ಲಿ ಪಡೆಯಬೇಕು. ತುಂಬಿಸಿದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಡಿಸೆಂಬರ್ 31, 2003

Address: Karnataka Sangha,
Dr. M. Vishveshwarayya Smarak Mandir Mogul Lane,
Chatrapati Shivaji Maharaj Marg, Off T.H. Kataria
Marg, Near Matunga Road Station, Matunga (W)),
Mumbai - 400 016.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 24377022/ 24379645 ಅಥವಾ Fax: 24381486 ಮೂಲಕ ವಿಶ್ವನಾಥ್ ಶೆಟ್ಟಿಯವರನ್ನು ಸಂಪರ್ಕಿಸಬಹುದು.

### ರಂಗೋಲಿಗೆ ಲಲಿತಕಲೆಯ ಸ್ಥಾನ ಸಿಗದಿರುವುದು ವಿಷಾದನೀಯ - ಮಮತಾ ರಾವ್

ಸಿಂಧೂ ಸಂಸ್ಕೃತಿ ಅವಶೇಷಗಳಲ್ಲಿ ಪ್ರಾಚೀನ ಕಾಲದಿಂದಲೂ ರಂಗೋಲಿಯು ಮಹಿಳೆಯರ ಹವ್ಯಾಸ ಆಗಿತ್ತು ಎಂಬುದು ತಿಳಿದು ಬಂದಿದೆ. ರಂಗೋಲಿ ದ್ರಾವಿಡ ಕಲೆ, ಭಾರತೀಯ ಕಲೆ ಹಾಗೂ ಜಾನಪದ ಕಲೆ. ಈ ಕಲೆಯನ್ನು ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ಹೆಸರುಗಳಲ್ಲಿ ಕರೆಯಲಾಗುತ್ತದೆ. ಆದರೆ ಇಂತಹ ಸೃಜನ ಶೀಲ ಕಲೆಗೆ ಭಾರತದಲ್ಲಿ ಲಲಿತಕಲೆಯ ಸ್ಥಾನ ಸಿಗಲಿಲ್ಲ ಎಂಬುದು

No. TECH/47-202/MBI/2003-05
Date of Posting : 10-12-2003

ವಿಷಾದನೀಯ ಎಂದು ಲೇಖಕಿ ಮಮತಾರಾವ್ ಅಭಿಪ್ರಾಯ ಪಟ್ಟರು.

ಅವರು ಕರ್ನಾಟಕ ಸಂಘದ ಮಹಿಳಾ ವಿಭಾಗದ ವತಿಯಿಂದ ಜರಗಿದ ರಂಗೋಲಿ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಅವರು ಮುಂದುವರಿಯುತ್ತಾ, ಮನುಷ್ಯ ಮನೆಯಲ್ಲಿ ನೆಲೆನಿಂತ ಕ್ಷಣದಿಂದಲೇ ರಂಗವಲ್ಲಿ ಜನನವಾಯಿತು. ಮನೆ ಪರಿಸರ ಶುಭ್ರವಾಗಿರಬೇಕು. ದುಷ್ಟಶಕ್ತಿಗಳು ಪ್ರವೇಶಿಸಬಾರದು ಎಂಬುದು ಈ ಕಲೆಯ ಜನನದ ಹಿಂದಿರುವ ಉದ್ದೇಶವಾಗಿತ್ತು. ಈ ಕಲೆ ವಿವಿಧ ಶುಭ ಕಾರ್ಯಗಳನ್ನು ವಿವಿಧ ಬಣ್ಣಗಳ ಮೂಲಕ ಸಾಂಕೇತಿಕರಿಸುತ್ತದೆ. ಇದರ ಮೂಲ ಸೂತ್ರ ಸತ್ಯಂ ಶಿವಂ ಸುಂದರಂ ಆಗಿದೆ. ರಂಗೋಲಿಯ ಬಣ್ಣ, ಹೂವು, ನೀರು ಇದಕ್ಕೆಲ್ಲ ವಿಭಿನ್ನ ಅರ್ಥಗಳಿವೆ. ರಂಗವಲ್ಲಿ ಬಿಡಿಸುವವರಿಗೆ ಅಷ್ಟೇ ಅಲ್ಲದೆ ನೋಡುಗರಿಗೂ ಆನಂದ ನೀಡುತ್ತದೆ ಎಂದರು ಮಮತಾ ರಾವ್.

ಈ ಸಮಾರಂಭದಲ್ಲಿ ತೀರ್ಪುಗಾರರಾಗಿ ಶ್ರೀಮತಿ ದೇಶಪಾಂಡೆ, ಡಾ. ಗಿರಿಜಾ ಶಾಸ್ತ್ರಿ, ಸುಮಾ ದ್ವಾರಕಾನಾಥ್ ಸಹಕರಿಸಿದ್ದರು.

### ಯಕ್ಷಗಾನ ಕೇವಲ ಮನೋರಂಜನೆಯ ಕಥಾವಸ್ತು ಅಲ್ಲ ! - ಪ್ರಾ| ಶಿವ ಬಿಲ್ಲವ

ಚೆಂಬೂರು ಕರ್ನಾಟಕ ಸಂಘದ ವತಿಯಿಂದ ಚೆಂಬೂರು ಕರ್ನಾಟಕ ಹೈಸ್ಕೂಲಿನಲ್ಲಿ ಶಾಲಾ ಮಕ್ಕಳಿಗಾಗಿ 'ಯಕ್ಷಗಾನದ ವಿಶ್ವರೂಪ'ದ ಬಗ್ಗೆ ದಿ| ಬಾಳ ಸುಬ್ಬಯ್ಯ ಶೆಟ್ಟಿ ಸ್ಮರಣಾರ್ಥ ದತ್ತಿ ಉಪನ್ಯಾಸ ಸಾಂಸ್ಕೃತಿಕ ಕಾರ್ಯಕ್ರಮ ಇತ್ತೀಚೆಗೆ ಜರಗಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ| ಶಾರದಾ ಸುಬ್ಬಯ್ಯ ಶೆಟ್ಟಿ ಮತ್ತು ಗೌರವ ಅತಿಥಿಗಳಾಗಿ ಪದವೀಧರ ಯಕ್ಷಗಾನ ಸಮಿತಿ ಮತ್ತು ಸಾಹಿತ್ಯ ಬಳಗದ ಅಧ್ಯಕ್ಷ ಎಚ್.ಬಿ.ಎಲ್. ರಾವ್ ಹಾಗೂ ಶ್ರೀ ಗೀತಾಂಬಿಕಾ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಸಂಚಾಲಕ ಮೂಲೂರು ಸಂಜೀವ ಕಾಂಚನ್ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪ್ರಾ| ನಾರಾಯಣ ಬಿ. ಅಂಚನ್ ವಹಿಸಿದ್ದರು.

ಪ್ರಾ| ಶಿವ ಬಿಲ್ಲವ ಅವರು ಯಕ್ಷಗಾನದ ವಿಶ್ವರೂಪದ ಬಗ್ಗೆ ಉಪನ್ಯಾಸ ಗೈಯುತ್ತಾ ಸ್ವತಃ ಯಕ್ಷಗಾನ ಕುಣಿತಗಳ ಶೈಲಿಯನ್ನು ಪ್ರದರ್ಶಿಸಿ ಆಂಗ್ಲ ಮತ್ತು ಕನ್ನಡ ಮಾಧ್ಯಮದ ಎಲ್ಲ ಮಕ್ಕಳ ಗಮನ ಸೆಳೆದರು. ಯಕ್ಷಗಾನ ಎಲ್ಲಿಂದ ಹೇಗೆ ಬೆಳೆಯುತ್ತಾ ಬಂತು ಎಂಬುದರ ಬಗ್ಗೆ ವಿವರವಾಗಿ ಉಪನ್ಯಾಸ ನೀಡಿದ ಅವರು ಕರ್ನಾಟಕದ ಗಂಡುಕಲೆ ಎಂದು ಪ್ರಸಿದ್ಧಿ ಪಡೆದ ಯಕ್ಷಗಾನ, ತಾಳಮದ್ದಳೆ ಇಂದು ಉಳಿದಿದ್ದರೆ ಅದು ಜನಾಶ್ರಯ ಮತ್ತು ಬೆಂಬಲದಿಂದಾಗಿ ಎಂದರು. ಯಾವುದೇ ಕಲೆಯನ್ನು ಶಾಸ್ತ್ರೀಯವಾಗಿ ಕಲಿತುಕೊಂಡರೆ ಅದು ನಮ್ಮಲ್ಲಿ ಜೀವಂತವಾಗಿ ಉಳಿಯಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಡಾ| ಶಾರದಾ ಶೆಟ್ಟಿಯವರು ಮಾತನಾಡುತ್ತಾ ಚೆಂಬೂರು ಕರ್ನಾಟಕ ಸಂಘ ಮತ್ತು ಶಾಲೆಯ ಕಾರ್ಯಕಾರಿ ಸಮಿತಿ ಕಳೆದ 7 ವರ್ಷಗಳ ಹಿಂದೆ ಮೃತಪಟ್ಟ ತನ್ನ ಪತಿಯನ್ನು ಸದಾ ನೆನಪಿಸಿಕೊಂಡು ಬರುತ್ತಿರುವುದನ್ನು ಕಂಡಾಗ ನನ್ನ ಮನಸ್ಸು ಅತೀವ ಆನಂದದಿಂದ ಪುಳಕಿತಗೊಳ್ಳುತ್ತಿದೆ ಎಂದರು.

ದತ್ತಿ ಉಪನ್ಯಾಸದ ನಂತರ ಶ್ರೀ ಗೀತಾಂಬಿಕಾ ಕೃಪಾಪೋಷಿತ ಯಕ್ಷಗಾನ ಮಂಡಳಿ, ಮುಂಬಯಿ ಇವರಿಂದ 'ಗದಾ ಯುದ್ಧ' ಯಕ್ಷಗಾನ ಬಯಲಾಟ ಪ್ರದರ್ಶನ ನಡೆಯಿತು.

### ದಿಲ್ಲಿಯಲ್ಲಿ ಮಂಜುನಾಥ ಐತಾಳರಿಗೆ ಶ್ರದ್ಧಾಂಜಲಿ

ಶಿವಮೊಗ್ಗದ ಗಾಜನೂರಿನಲ್ಲಿ ನಿಧನರಾದ ಮಾಜಿ ಪತ್ರಿಕಾ ಸಂಪಾದಕ, ಹಿರಿಯ ಕನ್ನಡ ಸೇವಕ ಯು.ವಿ. ಮಂಜುನಾಥ ಐತಾಳರಿಗೆ ದಿಲ್ಲಿಯಲ್ಲಿ ಕನ್ನಡ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಕಾರ್ಯಕರ್ತರು ನವೆಂಬರ್ ೧೧ರಂದು ಸಭೆ ಸೇರಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು 'ಶಮಸೋಮ' ಮಾಸಪತ್ರಿಕೆ, 'ಉಷಾಮಹಿ' ದಿನಪತ್ರಿಕೆ ಆರಂಭಿಸಿ ಮುನ್ನಡೆಸಿದ ಐತಾಳರು ಹೊರನಾಡ ಕನ್ನಡಿಗರ ಚಟುವಟಿಕೆಗಳಿಗೆ ಸಕ್ರಿಯ ಬೆಂಬಲಿಗರಾಗಿದ್ದರು. ೯೪ರಲ್ಲಿ ಪಣಜಿಯಲ್ಲಿ ನಡೆದ ೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನದಲ್ಲಿ ಐತಾಳರು ಕನ್ನಡ ಉತ್ಸವ ಉದ್ಘಾಟಿಸಿ ಕನ್ನಡವನ್ನು ವಿಶ್ವಮಟ್ಟದಲ್ಲಿ ಪ್ರಚಾರಗೊಳಿಸುವ ಯೋಜನೆ ಪ್ರಕಟಿಸಿದ್ದರೆಂದರು. ಕನ್ನಡಾಭಿವೃದ್ಧಿ ಮತ್ತು ಸೇವಾ ದೃಷ್ಟಿಯನ್ನಿಟ್ಟುಕೊಂಡು ಪತ್ರಿಕೆ ನಡೆಸಿದ ಐತಾಳರು ಹಲವಾರು ಸಾಹಿತಿ, ಪತ್ರಕರ್ತರನ್ನು ಪ್ರೋತ್ಸಾಹಿಸಿದರೆಂದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ಜಪಾನ್ ಕುರಿತ ವಿದ್ವಾಂಸ ಡಾ. ಎಚ್.ಎಸ್. ಪ್ರಭಾಕರ್ ಅವರು, ಕಡು ಬಡತನದಲ್ಲಿ ಹುಟ್ಟಿ ಬೆಳೆದರೂ ಸತತ ಪರಿಶ್ರಮ ಸಾಧನೆಗಳಿಂದ ಉನ್ನತ ಮಟ್ಟಕ್ಕೇರಬಹುದೆಂಬುದಕ್ಕೆ ಐತಾಳರು ಉತ್ತಮ ನಿದರ್ಶನರಾಗಿರುವರೆಂದರು. ಸಾಹಿತ್ಯ, ಪತ್ರಿಕಾ ಸೇವಾರಂಗದ ಜೊತೆಯಲ್ಲೇ ಸಿಹಿತಿಂಡಿ ತಯಾರಿಕಾ ಉದ್ಯಮದಲ್ಲಿ ಐತಾಳರು ಮರೆಯಲಾಗದ ಸಾಧನೆ ಗಳಿಸಿರುವರೆಂದರು.

ಇದೇ ಸಂದರ್ಭದಲ್ಲಿ ಐತಾಳರಿಗೆ ಸಂಬಂಧಿಸಿದ ಛಾಯಾ ಚಿತ್ರಗಳು ಹಾಗೂ ಐತಾಳರ ಪತ್ರಿಕೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

### ಡಾ| ಜಿ.ಎನ್ ಉಪಾಧ್ಯರ 'ಕನ್ನಡ ಮನಸ್ಸುಗಳೊಂದಿಗೆ' ಕೃತಿ ಬಿಡುಗಡೆ



*ಡಾ. ಜಿ. ಎನ್. ಉಪಾಧ್ಯ ಅವರ 'ಕನ್ನಡ ಮನಸ್ಸುಗಳೊಂದಿಗೆ' ಕೃತಿಯನ್ನು ಪತ್ರಕರ್ತ ಚಂದ್ರಶೇಖರ ಪಾಲೆತ್ತಾಡಿ ಬಿಡುಗಡೆಗೊಳಿಸುತ್ತಿರುವುದು.*

ಆಧುನಿಕ ಇತಿಹಾಸದಲ್ಲಿ ಕನ್ನಡಿಗರು ಮಾಡಿದ ಸಾಧನೆ ಬಹಳಷ್ಟು ಇದೆ. ಅವುಗಳ ದಾಖಲಾತಿ ಆಗಬೇಕು. ಈ ನೆಲೆಯಲ್ಲಿ ಡಾ. ಜಿ.ಎನ್. ಉಪಾಧ್ಯ ಅವರ 'ಕನ್ನಡ ಮನಸ್ಸುಗಳೊಂದಿಗೆ' ಕೃತಿಯು ಸ್ವಾಗತಾರ್ಹ ಪ್ರಯತ್ನವಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ರವಿ ರಾ. ಅಂಚನ್ ಹೇಳಿದರು.

ಮುಂಬಯಿಯ ಸುವರ್ಣಗಿರಿ ಪ್ರಕಾಶನ ಕರ್ನಾಟಕ ಸಂಘದ ಕಿರು ಸಭಾಗೃಹದಲ್ಲಿ ಆಯೋಜಿಸಿದ್ದ ಕೃತಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಅವರು ಕೃತಿಕಾರ ಜಿ.ಎನ್. ಉಪಾಧ್ಯ ಅವರನ್ನು ಅಭಿನಂದಿಸುತ್ತಾ ಈ ಕೃತಿಯು ಮುಂಬಯಿಯ ಇಪ್ಪತ್ತು ಸಾಧನಶೀಲ ಕನ್ನಡಿಗರ ಒಳನೋಟವನ್ನು ಬಿಂಬಿಸುತ್ತದೆ. ತಮ್ಮ ಪ್ರವೃತ್ತಿಯಿಂದ ಹಾಗೂ ವಿಶಿಷ್ಟ ಗುಣಗಳಿಂದ ಈ ವ್ಯಕ್ತಿಗಳು ಚರಿತ್ರೆಯ ಭಾಗವಾಗುತ್ತಾರೆ ಎಂದರು. ಮುಂದಿನ ದಿನಗಳಲ್ಲೂ ಇಂತಹ ಚರಿತ್ರೆಯನ್ನು ದಾಖಲಿಸುವ ಕೆಲಸಗಳು ನಡೆಯಬೇಕು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಪತ್ರಕರ್ತ ಚಂದ್ರಶೇಖರ ಪಾಲೆತ್ತಾಡಿ ಅವರು ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಾ ಮುಂಬಯಿಯಲ್ಲಿದ್ದು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದವರ ಸಂಖ್ಯೆ ಕಡಿಮೆಯದೇನಲ್ಲ. ಉಪಾಧ್ಯರು ಈ ಕೃತಿಯಲ್ಲಿ ಇಪ್ಪತ್ತು ಮನಸ್ಸುಗಳೊಂದಿಗೆ ಮಾತನಾಡಿದ್ದಾರೆ. ಆದರೆ ಮುಂಬಯಿಯಲ್ಲಿ ಒಂದು ಸಾವಿರ ಕನ್ನಡ ಮನಸ್ಸುಗಳು ಇರಬಹುದು. ಇದನ್ನು ದಾಖಲಿಸುವ ಇನ್ನಷ್ಟು ಕೃತಿಗಳು ಬರಬೇಕು ಎಂದರು.

ಕೃತಿಯ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿದ ಯುವ ನಾಟಕಕಾರ ಭರತ್‌ಕುಮಾರ್ ಪೊಲಿಪು ಅವರು, ಜಿ.ಎನ್. ಉಪಾಧ್ಯ ಅವರು ಇಲ್ಲಿನ ಸಂದರ್ಶನಗಳನ್ನು ತೆಗೆದುಕೊಳ್ಳುವ ಮೊದಲು ಆ ವ್ಯಕ್ತಿಗಳ ಬಗ್ಗೆ ಅಧ್ಯಯನ ಮಾಡಿ ಅವರ ಸಾಧನೆಗಳ ಚಿತ್ರಣವನ್ನು ನೀಡಿದ್ದಾರೆ. ಅವರು ಬಳಸಿರುವ ಭಾಷೆಯೂ ಕಾವ್ಯಾತ್ಮಕವಾಗಿದ್ದು, ಎಲ್ಲಿಯೂ ವಾಚ್ಯ ಅನ್ನಿಸುವುದಿಲ್ಲ. ವಿಮರ್ಶಕರಲ್ಲಿ ವಿನಯಶೀಲತೆ ಬಹುಮುಖ್ಯ. ಅಂತಹ ವ್ಯಕ್ತಿತ್ವ ಉಪಾಧ್ಯರ ಬರಹವನ್ನು ಗಮನಿಸಿದಾಗ ಗೋಚರವಾಗುತ್ತದೆ ಎಂದರು.

ಕೃತಿ ಪರಿಚಯ ಮಾಡಿದ ಪತ್ರಕರ್ತ ಈಶ್ವರ ಅಲೆವೂರು ಅವರು, ಇಲ್ಲಿನ ಸಂದರ್ಶನ ಲೇಖನಗಳು ವಿವಿಧ ಸಂದರ್ಭಗಳಲ್ಲಿ ಬರೆದವುಗಳಾದರೂ ಬರಹದ ಸಾಹಿತ್ಯಿಕ, ಸಾಂಸ್ಕೃತಿಕ ಮೌಲ್ಯಗಳಿಂದಾಗಿ ಸಂದರ್ಭದ ಮಿತಿಯನ್ನು ದಾಟಿ ಎಲ್ಲ ಕಾಲಕ್ಕೂ ಪ್ರಸ್ತುತವಾಗುವ ಗುಣ ವಿಶೇಷತೆಯನ್ನು ಹೊಂದಿದೆ ಎಂದು ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸುವರ್ಣಗಿರಿ ಪ್ರಕಾಶನದ ನಿರ್ದೇಶಕ ಸದಾನಂದ ಸುವರ್ಣ ಸ್ವಾಗತಿಸಿ ಪ್ರಸ್ತಾವನೆಗೈದರು. ಗೋಪಾಲ ತ್ರಾಸಿ ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಕೃತಿಕಾರ ಜಿ. ಎನ್. ಉಪಾಧ್ಯ ತನಗೆ ಸಹಕರಿಸಿದವರಿಗೆ ಕೃತಜ್ಞತೆ ಅರ್ಪಿಸಿದರು. ಗಿರೀಶ್ ಸಾಲ್ವಾಡ್ ಪ್ರಾರ್ಥನೆ ಗೀತೆ ಹಾಡಿದರು. ಜೆ.ಪಿ. ಕುಸುಮಾ ವಂದಿಸಿದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938